# ಅಮರ ಬಾಪು ಚಿಂತನ

ಗಾಂಧಿ ದನಿ ದರ್ಪಣ


ಕನ್ನಡ ಮತ್ತು ಆಂಗ್ಲ ದ್ವೈಮಾಸಿಕ

# AMARA BAAPU CHINTANA

Mirror of Gandhi

Kannada & English Bi-Monthly

ಸಂಪುಟ : 14 । ಸಂಚಿಕೆ : 02 । ಬೆಲೆ : ರೂ. 20/– । ಪುಟ : 32 । ಮಾರ್ಚ್–ಏಪ್ರಿಲ್ 2026



*Iconic Indian Leaders in Harmony*

ಸಮಾಜ ಕಲ್ಯಾಣ ಇಲಾಖೆ
ಡಾ. ಬಾಬು ಜಗಜೀವನ ರಾಂ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮ ನಿಯಮಿತ.,
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಡಾ.ಬಾಬು ಜಗಜೀವನ ರಾಂ ಲಿಡ್ಕರ್ ಭವನ, ವಿಲ್ಲಸ್ ೯ ಟ್ಯಾಂಕ್, ಏರಿಯಾ, ವಸಂತ ನಗರ, ಬೆಂಗಳೂರು-560052
LIDKAR

# ನಿಗಮದ ಯೋಜನೆಗಳು ಹಾಗೂ ಸಾಧನೆಗಳ ವಿವರ

## ಸಾಧನೆಗಳು

**ಪ್ರಾಡಾ ಒಪ್ಪಂದ:** ಕರ್ನಾಟಕ ರಾಜ್ಯದ (ಲಿಡ್ಕರ್) ನಿಗಮದ ವತಿಯಿಂದ ರಾಜ್ಯದ ನೆಲಮೂಲದ ನೈಜ ಚರ್ಮ ಕುಶಲಕರ್ಮಿಗಳ ಹಿತಾಸಕ್ತಿಯನ್ನು ಕಾಪಾಡುವ ಉದ್ದೇಶದಿಂದ ಮಹತ್ವದ ಹೆಜ್ಜೆ ಇಡಲಾಗಿದೆ. ಜಿ.ಐ ಟ್ಯಾಗ್ ಹೊಂದಿರುವ ಕೊಲ್ಹಾಪುರಿ ಪಾದರಕ್ಷೆ ತಯಾರಿಕೆಯಲ್ಲಿ ಇಟಲಿ ಮೂಲದ ಪ್ರಾಡಾ ಕಂಪನಿಯೊಂದಿಗೆ ಕರಾರು ಒಪ್ಪಂದ ಮಾಡಿಕೊಂಡು ಜಾಗತಿಕ ಮಟ್ಟದಲ್ಲಿ ಲಿಡ್ಕರ್ ಚರ್ಮ ಕುಶಲಕರ್ಮಿಗಳು ಗುರುತಿಸುವಂತೆ ಮಾಡಲಾಗಿದೆ.



ಇಟಲಿ ಮೂಲದ ಪ್ರತಿಷ್ಠಿತ ಪ್ರಾಡಾ ಸಂಸ್ಥೆಯೊಡನೆ ಲಿಡ್ಕರ್ ಅಂತರರಾಷ್ಟ್ರೀಯ ಒಪ್ಪಂದ.

**ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಟರ್ಮಿನಲ್-2ನಲ್ಲಿ ಕಲಾಲೋಕ ಮಳಿಗೆ ತೆರೆಯಲಾಗಿದೆ:** ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಟರ್ಮಿನಲ್-2ನ ಕಲಾಲೋಕ ಆವರಣದಲ್ಲಿ ಮಳಿಗೆ ತೆರೆಯಲಾಗಿದೆ. ಜಿ.ಐ ಟ್ಯಾಗ್ ಮಾನ್ಯತೆ ಪಡೆದಿರುವ ಕೊಲ್ಹಾಪುರಿ ಪಾದರಕ್ಷೆಗಳು ಮತ್ತು ಚರ್ಮೋತ್ಪನ್ನಗಳ ಪ್ರದರ್ಶನ ಮತ್ತು ಮಾರಾಟದ ವ್ಯವಸ್ಥೆ ಕಲ್ಪಿಸಲಾಗಿದೆ.



ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಟರ್ಮಿನಲ್-2ನ ಕಲಾಲೋಕ ಆವರಣದಲ್ಲಿ ಲಿಡ್ಕರ್ ಮಳಿಗೆ ಪ್ರಾರಂಭಿಸಿರುವುದು.

**ಮೈಸೂರು ಮಹಾರಾಜ ಮಹಾರಾಣಿ ಚಪ್ಪಲಿ:** (Lidkar) ಸಂಸ್ಥೆಯು ಪಾರಂಪರಿಕ ಶೈಲಿಯ, ಉತ್ತಮ ಗುಣಮಟ್ಟದ ನೈಜ ಚರ್ಮದ (Genuine Leather) "ಮಹಾರಾಜ-ಮಹಾರಾಣಿ" ಮಾದರಿಯ ಚಪ್ಪಲಿಗಳನ್ನು ಪರಿಚಯಿಸಿ ಭಾರಿ ಜನಪ್ರಿಯತೆ ಗಳಿಸಿದೆ. ಕೊಲ್ಹಾಪುರಿಗಿಂತ ಭಿನ್ನವಾದ ಈ ವಿಶಿಷ್ಟ ಪಾದರಕ್ಷೆಗಳು ಆರಾಮದಾಯಕ ಹಾಗೂ ಆರೋಗ್ಯಕರವಾಗಿದ್ದು, ಬೆಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಕಲಾಲೋಕದಲ್ಲೂ ಲಭ್ಯವಿವೆ.

**ನಿಗಮದ ವ್ಯಾಪಾರ ವಹಿವಾಟು:** 2022-23ನೇ ಸಾಲಿನಲ್ಲಿ ಅಂದಾಜು ರೂ.9.00 ಕೋಟಿ ವಹಿವಾಟಿನಿಂದ ಅಂದಾಜು ಪ್ರಸ್ತುತ ಸಾಲಿನಲ್ಲಿ ರೂ.36.00 ಕೋಟಿ ವಹಿವಾಟು ಹೆಚ್ಚಳವಾಗಿರುತ್ತದೆ.

**ಮಾರಾಟ ಮಳಿಗೆಗಳು:** ರಾಜ್ಯಾದ್ಯಂತ 15 ಅಪ್ಪಟ ಚರ್ಮೋತ್ಪನ್ನಗಳ ಮಾರಾಟ ಮಳಿಗೆಗಳು ತೆರೆಯಲಾಗಿದೆ.



ನಿಗಮದ ಯೋಜನೆಯಾದ ಕಾಯಕಸ್ಫೂರ್ತಿ ಫಲಾನುಭವಿಗಳಿಗೆ ಚೆಕ್ ವಿತರಿಸುತ್ತಿರುವುದು.

**ಆನ್‌ಲೈನ್ ಸೇವೆ:** ಇ-ಕಾಮರ್ಸ್‌ನ ವೇದಿಕೆ shop.lidkar.comನಲ್ಲಿಯೂ ಲಿಡ್ಕರ್ ಉತ್ಪನ್ನಗಳು ಮಾರಾಟಕ್ಕೆ ಲಭ್ಯವಿರುತ್ತದೆ. ಶೀಘ್ರದಲ್ಲಿ AMAZON, FLIPCART, MEESHOಗಳಲ್ಲಿ ಅಪ್ಪಟ ಚರ್ಮೋತ್ಪನ್ನಗಳು ಲಭ್ಯವಿರುತ್ತದೆ.

## ಯೋಜನೆಗಳ ವಿವರ:

1. **ತರಬೇತಿ ಕಾರ್ಯಕ್ರಮಗಳು**

* **ಕೌಶಲ್ಯಾಭಿವೃದ್ಧಿ:** 2013ರಿಂದ 2023ರವರೆಗೆ ಪ್ರತಿ ಜಿಲ್ಲೆಗೆ ಅಂದಾಜು 8000 ಫಲಾನುಭವಿಗಳಿಗೆ ತರಬೇತಿ ನೀಡಲಾಗಿರುತ್ತದೆ.
* **ಕೌಶಲ್ಯ ಉನ್ನತೀಕರಣ:** ಲಿಡ್ಕರ್ ಸಹಯೋಗದೊಂದಿಗೆ ಕಿಲ್ಟ್ ಸಂಸ್ಥೆಯಲ್ಲಿ ಡಿಪ್ಲೊಮ ಇನ್ ಫ್ಯಾಷನ್ ಡಿಸೈನ್ ಕೋರ್ಸ್‌ಗಳನ್ನು ನೀಡಲಾಗಿದೆ.

2. **ಸ್ವಯಂ ಉದ್ಯೋಗ ಯೋಜನೆಗಳು**

* "ಚರ್ಮಶಿಲ್ಪ" ಯಂತ್ರಾಧಾರಿತ ಉತ್ಪಾದನಾ ಘಟಕಗಳನ್ನು ಸ್ಥಾಪಿಸುವ ಯೋಜನೆ
* "ಸ್ವಾವಲಂಬಿ" /"ಸಂಚಾರಿ" ಮಾರಾಟ ಮಳಿಗೆ ಯೋಜನೆ
* ಮಹಿಳಾ ಕುಶಲಕರ್ಮಿಗಳಿಗೆ "ಕಾಯಕಸ್ಫೂರ್ತಿ" ಯೋಜನೆ
* "ಪಾದುಕೆ ಕುಟೀರ" ಯೋಜನೆ
* ಮಾರುಕಟ್ಟೆ ಸಹಾಯ ಯೋಜನೆ:
* ಚರ್ಮಕಾರರ ಕಿರು ಆರ್ಥಿಕ ಚಟುವಟಿಕೆಗಳಿಗಾಗಿ ನೇರ ಸಾಲ ಯೋಜನೆ.

3. **ಡಾ|| ಬಾಬು ಜಗಜೀವನ ರಾಂ ಚರ್ಮಕಾರರ ವಸತಿ ಯೋಜನೆ.**

4. **ಚರ್ಮ ಕುಶಲಕರ್ಮಿಗಳು ವಾಸಿಸುತ್ತಿರುವ ಕಾಲೋನಿಗಳಲ್ಲಿ ಮೂಲಭೂತ ಸೌಕರ್ಯಗಳನ್ನು ಒದಗಿಸುವ ಯೋಜನೆ.**



ಸಮಾಜ ಕಲ್ಯಾಣ ಇಲಾಖೆಯ ಸಚಿವರು ಮತ್ತು ನಿಗಮದ ಅಧ್ಯಕ್ಷರು ಫಲಾನುಭವಿಗಳಿಗೆ ಕುಟೀರದ ಪ್ರಮಾಣಪತ್ರ ನೀಡುತ್ತಿರುವುದು.

ಅಮರ ಬಾಪು ಚಿಂತನ

ಸಂಪುಟ: 14 ಸಂಚಿಕೆ: 2 ಮಾರ್ಚ್–ಏಪ್ರಿಲ್ 2026


**ಸಂಪಾದಕೀಯ**



# ಮಾನವತೆಯ ಮಾರ್ಗದರ್ಶನ

ಇಂದಿನ ವೇಗದ ಸಮಾಜದಲ್ಲಿ ಮೌಲ್ಯಗಳ ಕುಸಿತ, ಅಸಮಾನತೆ, ಅಸಹಿಷ್ಣುತೆ ಮತ್ತು ಅನ್ಯಾಯಗಳ ನಡುವೆ ಮಾನವತೆಯ ನಿಜ ಸ್ವರೂಪವನ್ನು ಹುಡುಕುವುದು ಅತ್ಯವಶ್ಯಕವಾಗಿದೆ. ಇಂತಹ ಸಂದರ್ಭದಲ್ಲಿ ಮಹಾತ್ಮಾ ಗಾಂಧಿ, ಬಸವಣ್ಣ, ಭಗವಾನ್ ಮಹಾವೀರ, ಡಾ. ಬಿ.ಆರ್. ಅಂಬೇಡ್ಕರ್ ಮತ್ತು ಮಹಿಳಾ ಚಿಂತನೆಯ ಮೂಲಸಿದ್ಧಾಂತಗಳು ನಮಗೆ ಸಮಗ್ರ ದಾರಿದೀಪಗಳಾಗಿ ಕಾಣಿಸುತ್ತವೆ. ಇವರ ಚಿಂತನೆಗಳು ಬೇರೆ ಬೇರೆ ಕಾಲಘಟ್ಟಗಳಲ್ಲಿ ಹುಟ್ಟಿಕೊಂಡರೂ, ಮಾನವೀಯತೆ, ಸಮಾನತೆ ಮತ್ತು ಶಾಂತಿಯ ಸಂದೇಶದಲ್ಲಿ ಒಂದಾಗುತ್ತವೆ.

ಗಾಂಧಿಜಿಯವರ ಅಹಿಂಸೆ, ಸತ್ಯ ಮತ್ತು ಸರ್ವೋದಯದ ತತ್ವಗಳು ಸಮಾಜದ ಎಲ್ಲ ವರ್ಗಗಳ ಏಳಿಗೆಯನ್ನು ಲಕ್ಷ್ಯವಿಟ್ಟವು. ಅವರ ಚಿಂತನೆಗಳಲ್ಲಿ ಮಹಿಳೆಯರ ಪಾತ್ರ ಅತ್ಯಂತ ಮಹತ್ವದ್ದು. ಮಹಿಳೆಯನ್ನು ಶಕ್ತಿ ಮತ್ತು ನೈತಿಕತೆಯ ಪ್ರತಿರೂಪವಾಗಿ ನೋಡಿದ ಗಾಂಧಿ, ಸ್ವಾತಂತ್ರ್ಯ ಹೋರಾಟದಲ್ಲಿ ಅವರನ್ನು ಸಕ್ರಿಯವಾಗಿ ಪಾಲ್ಗೊಳ್ಳುವಂತೆ ಮಾಡಿದರು. ಇದೇ ಸ್ಫೂರ್ತಿ ಇಂದಿನ ಮಹಿಳಾ ದಿನಾಚರಣೆಯ ಮೂಲ ಆಶಯವನ್ನು ಮತ್ತಷ್ಟು ಬಲಪಡಿಸುತ್ತದೆ.



ಬಸವಣ್ಣನವರ "ಕಾಯಕವೇ ಕೈಲಾಸ" ಮತ್ತು "ದಾಸೋಹ" ತತ್ವಗಳು ವರ್ಣವ್ಯವಸ್ಥೆಯ ವಿರುದ್ಧದ ಕ್ರಾಂತಿಕಾರಿ ಚಳವಳಿಯನ್ನೇ ರೂಪಿಸಿದವು. ಸಮಾಜದಲ್ಲಿ ಸಮಾನತೆ, ಶ್ರಮದ ಗೌರವ ಮತ್ತು ಮಾನವೀಯ ಮೌಲ್ಯಗಳನ್ನು ಪ್ರತಿಪಾದಿಸಿದ ಬಸವಣ್ಣ, ಮಹಿಳೆಯರಿಗೂ ಸಮಾನ ಸ್ಥಾನಮಾನ ನೀಡಿದ ಮುಂಚೂಣಿಯ ಚಿಂತಕರಾಗಿದ್ದರು. ಅವರ ಅನುಭವ ಮಂಟಪವು ಸಮಾನತೆಯ ಪ್ರತೀಕವಾಗಿತ್ತು.

ಭಗವಾನ್ ಮಹಾವೀರರ ಅಹಿಂಸೆ, ಅಪರಿಗ್ರಹ ಮತ್ತು ಅನೇಕಾಂತವಾದ ತತ್ವಗಳು ಇಂದಿಗೂ ಸಮಕಾಲೀನವಾಗಿವೆ. ಪ್ರತಿಯೊಬ್ಬ ಜೀವಿಗೂ ಹಿಂಸೆ ಮಾಡಬಾರದು ಎಂಬ ಅವರ ಸಂದೇಶವು ಮಾನವೀಯತೆಯ ಅತ್ಯುನ್ನತ ಮಟ್ಟವನ್ನು ತೋರಿಸುತ್ತದೆ. ಭೌತಿಕಾಸಕ್ತಿಯನ್ನು ಕಡಿಮೆ ಮಾಡುವ ಮೂಲಕ ಮನಸ್ಸಿನ ಶುದ್ಧತೆಯನ್ನು ಸಾಧಿಸುವುದೇ ಅವರ ಮಾರ್ಗ.

ಡಾ. ಬಿ.ಆರ್. ಅಂಬೇಡ್ಕರ್ ಅವರು ಸಾಮಾಜಿಕ ನ್ಯಾಯದ ಶಿಲ್ಪಿಯಾಗಿದ್ದರು. ಸಮಾನತೆ, ಸ್ವಾತಂತ್ರ್ಯ ಮತ್ತು ಸಹೋದರತ್ವದ ಮೌಲ್ಯಗಳನ್ನು ಭಾರತೀಯ ಸಂವಿಧಾನದಲ್ಲಿ ಅಡಗಿಸಿಕೊಂಡು, ಹಿಂದುಳಿದ ವರ್ಗಗಳಿಗೆ ಧ್ವನಿಯಾದರು. ಮಹಿಳಾ ಹಕ್ಕುಗಳ ಬಗ್ಗೆ ಅವರ ಸ್ಪಷ್ಟ ನಿಲುವು, ಶಿಕ್ಷಣ ಮತ್ತು ಸ್ವಾವಲಂಬನೆಯ ಮೇಲಿನ ಒತ್ತಡ ಇಂದಿಗೂ ಪ್ರೇರಣೆಯಾಗಿದೆ.

ಇವೆಲ್ಲ ಚಿಂತನೆಗಳ ಸಮನ್ವಯದಲ್ಲಿ ನಾವು ಕಂಡುಕೊಳ್ಳುವ ಮಹತ್ವದ ಅಂಶವೆಂದರೆ– ಮಾನವೀಯತೆ ಮತ್ತು ಸಮಾನತೆ. ಮಹಿಳಾ ದಿನಾಚರಣೆ ಕೇವಲ ಆಚರಣೆಯಲ್ಲ; ಅದು ಸಮಾನ ಹಕ್ಕುಗಳ ಅರಿವು, ಗೌರವ ಮತ್ತು ಅವಕಾಶಗಳಿಗಾಗಿ ಹೋರಾಟದ ಸಂಕೇತವಾಗಿದೆ. ಗಾಂಧಿಯವರ ಅಹಿಂಸೆ, ಬಸವಣ್ಣನವರ ಸಮಾನತೆ, ಮಹಾವೀರರ ದಯೆ ಮತ್ತು ಅಂಬೇಡ್ಕರವರ ನ್ಯಾಯಬದ್ಧತೆ–all these converge into a unified vision for a just society.

ಇಂದಿನ ಭಾರತದಲ್ಲಿ, ಇಂತಹ ಚಿಂತನೆಗಳನ್ನು ಕೇವಲ ಸ್ಮರಣೆಗಷ್ಟೇ ಸೀಮಿತಗೊಳಿಸದೆ, ಅವುಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳುವುದು ಅತ್ಯಗತ್ಯ. ಸಮಾಜದ ಪ್ರತಿಯೊಬ್ಬ ವ್ಯಕ್ತಿಯೂ ಈ ಮೌಲ್ಯಗಳನ್ನು ಅಳವಡಿಸಿಕೊಂಡರೆ ಮಾತ್ರ ನಿಜವಾದ ಪ್ರಗತಿ ಸಾಧ್ಯ.

ಕೊನೆಗೂ, ಗಾಂಧಿ–ಬಸವಣ್ಣ–ಮಹಾವೀರ–ಅಂಬೇಡ್ಕರ್–ಮಹಿಳಾ ಚಿಂತನೆಗಳ ಸಮನ್ವಯವು ನಮಗೆ ಹೇಳುವ ಸಂದೇಶ ಸ್ಪಷ್ಟವಾಗಿದೆ: “ಸಮಾನತೆ, ಶಾಂತಿ ಮತ್ತು ಮಾನವೀಯತೆ ಇಲ್ಲದೆ ಯಾವುದೇ ಸಮಾಜವು ಶಾಶ್ವತವಾಗಿ ಮುಂದುವರೆಯಲಾರದು.” ಇದನ್ನು ಅರಿತು, ಅನುಸರಿಸುವುದು ನಮ್ಮೆಲ್ಲರ ಕರ್ತವ್ಯ.

| ಸಂಪಾದಕರು | ಸಲಹಾ ಸಮಿತಿ | ಸಂಪಾದಕೀಯ ನೆರವು | ಜಾಹಿರಾತು ವ್ಯವಸ್ಥಾಪಕರು | ಕಾನೂನು ಸಲಹೆಗಾರರು |
|---|---|---|---|---|
| **ಜೀರಿಗೆ ಲೋಕೇಶ್** | ಡಾ॥ ವೂಡೇ ಪಿ. ಕೃಷ್ಣ<br>ಪ್ರೊ॥ ಮಲ್ಲೇಪುರಂ ಜಿ. ವೆಂಕಟೇಶ<br>ಎಚ್. ಕೃಷ್ಣ | ಎನ್. ಗಾಯತ್ರಿದೇವಿ<br>ಉಪ ಸಂಪಾದಕರು<br>ಪ್ರಣವ<br>ಸುಮ ಚಂದ್ರಶೇಖರ್ | ಪಿ.ಎಸ್. ಗುರುರಾಜ್<br>ಅಂಚೆ ನಿರ್ವಹಣೆ<br>ಕೆ.ದಕ್ಷಿಣಾಮೂರ್ತಿ | ವಿಜಯ್ ನಾರಾಯಣ್<br>ಲೆಕ್ಕ ಪರಿಶೋಧಕರು<br>ರಾಜಶೇಖರ ಐತಾಳ್<br>ಪ್ರತಿನಿಧಿ<br>ಚೆನ್ನು ಎಸ್. ಮಠದ್(ದೆಹಲಿ) |

**AMARA BAAPU CHINTANA**
Regd.office : Gandhi Bhavana, Kumara Park East, Bangalore-560 001
Mobile: 94480 42653, 90356 18076
E-mail: editor.abc2020@gmail.com, visit us at: www.amarabaapuchintana.org, facebook.com/amarabaapuchintana

# ಈ ಸಂಚಿಕೆಯಲ್ಲಿ...


05 ಪ್ರೀತಿಯ ಬಾಪೂ
– ಅವಿನಾಶ್ ಕೆ.ಎಸ್.

06 ಗಾಂಧೀಜಿ ಕಡೆದ ದಿವ್ಯವಿಗ್ರಹ ಬಾ
– ಸಿದ್ದವನಹಳ್ಳಿ ಕೃಷ್ಣಶರ್ಮ

09 ಸರಳ ಜೀವನ
– ಗೊರೂರು ರಾಮಸ್ವಾಮಿ ಅಯ್ಯಂಗಾರ್

11 ದಿನಚರಿ ಮಹತ್ವ
– ಮತ್ತೂರು ಕೃಷ್ಣಮೂರ್ತಿ

12 ಜ್ಞಾನದ ದೀವಿಗೆ ಹಚ್ಚಿದ ಮಹಾನ್ ಮಾನವತಾವಾದಿ
– ಕೆ.ವಿ.ಪದ್ಮಾವತಿ

19 ಮಾನವಕುಲಕ್ಕೆ ಮಾರ್ಗದರ್ಶಕ ಮಹಾವೀರರ ಧರ್ಮಸಂದೇಶ
– ಡಾ. ಗುರುರಾಜ ಪೋಶೆಟ್ಟಿಹಳ್ಳಿ

20 ಭಾರತೀಯ ಮಹಿಳೆಯರಿಗೆ ಪ್ರೇರಣೆ ನಾಯ್ಡು
– ಸುಮ ಚಂದ್ರಶೇಖರ್

22 ಗಾಂಧಿ ಎಂಬ ಆಶಾಕಿರಣ
– ಡಿ.ಎಸ್. ನಾಗಭೂಷಣ

23 ಶಿಕ್ಷಣದ ಮಹತ್ವವನ್ನು ಸಾರಿದ ಅಂಬೇಡ್ಕರ್
– ಡಾ. ಜಗನ್ನಾಥ ಕೆ. ಡಾಂಗೆ

25 Dandi March: History and Significance

27 Three Articles, One Revolution


29 Gandhiji and the Spirit of Women Satyagrahis

30 A Silent Revolution of Truth


**ಲೇಖನಗಳು ಆಯಾ ಲೇಖಕರ ಅಭಿಪ್ರಾಯಗಳು**

ಆಸಕ್ತ ಲೇಖಕರು ಗಾಂಧಿ ವಿಚಾರಧಾರೆಯ ಚಿಂತನಪ್ರದ ಲೇಖನ, ಕವನ, ಹಾಗೂ ಗಾಂಧಿಪ್ರಣೀತ ತತ್ವಗಳಿಂದ ಪ್ರೇರಿತ ರಚನಾತ್ಮಕ ಸೇವಾ ಕೈಂಕರ್ಯ ಮಾಡುತ್ತಿರುವ ಸಂಘ ಸಂಸ್ಥೆಗಳ ಪರಿಚಯಗಳನ್ನು ನಮಗೆ ಬರೆದು ಕಳುಹಿಸಿ. ಸೂಕ್ತವೆನಿಸಿದ್ದನ್ನು ಪ್ರಕಟಿಸಲಾಗುವುದು. ಲೇಖನ ಪತ್ರಿಕೆಯ ವಿಳಾಸಕ್ಕೆ ಅಥವಾ editor.abc2020@gmail.com ಕಳುಹಿಸಿ







ನನ್ನ ಜೀವನವೇ ನನ್ನ ಸಂದೇಶ | My Life is My Message

# ಪ್ರೀತಿಯ ಬಾಪೂ



ಪ್ರೀತಿಯ ಬಾಪೂ ಅಳಿಸದು, ಅಮರವದು
ನೀ ಒತ್ತಿದ ಛಾಪು !
ಸತ್ಯದ ಹಾದಿಯ ಹಿಡಿದು ನುಡಿದಂತೆ ನಡೆದೆ
ಶಾಂತಿ-ಅಹಿಂಸೆಯಿಂದಲೆ
ವಸಾಹತು ಸಾಮ್ರಾಜ್ಯ ಕೆಡವಿದೆ
ಬೋಧಿಸಿದೆ ತತ್ವಗಳ ಸ್ವತಃ ಆಚರಿಸಿ
ಆತ್ಮ ಸಂಯಮಿಯಾದೆ
ಬಾಪೂ, ಸರಿ ದಾರಿಯ ತೋರುತ
ದೀವಿಗೆಯಾದೆ

ಪ್ರೀತಿಯ ಬಾಪೂ ಕೆಡವದು, ಕಳಶವದು
ನೀ ತಿಳಿಸಿದೆ ಮಾತು
ಸ್ವಚ್ಛತೆ ಸರಳತೆ ಆಧ್ಯಾತ್ಮಿಕ ಸಂಪನ್ನತೆ
ಸಾಧನಗಳಿಂದ ಸಮಾಜ ಪರಿವರ್ತನೆಗೆ
ನಾಂದಿ ಹಾಡಿದೆ
ಮಾನವನೆದೆಯಲಿ ದೇವರ ಕಂಡೆ
ಮನುಕುಲ ಸೇವೆಯ ನಿತ್ಯವೂ ಉಂಡೆ
ಬಾಪೂ, ನಿರ್ಗತಿಕರ ಬಾಳನು ಬೆಳಗಿ
ಮಹಾತ್ಮನಾದೆ


ಪ್ರೀತಿಯ ಬಾಪೂ ಮರೆಯದು, ಮೌಲ್ಯವದು
ನೀ ನೀಡಿದ ಕಾಣ್ಕೆ
ಸಣ್ಣದು ಸುಂದರ ಎಂಬುದ ತಿಳಿಸುತ
ಸ್ವದೇಶಿ ಕರ್ಮವ ಒರೆಗೆ ಹಚ್ಚುತಾ
ದೇಶದ ಪ್ರಗತಿಗೆ ಭದ್ರ ಬುನಾದಿಯ ಹಾಕಿದೆ
ಬಾಪೂ, ರಾಷ್ಟ್ರದ ಹಿತಕೆ ಜೀವವ ತೇಯುತ
ರಾಷ್ಟ್ರಪಿತನಾದಿ

- ಅವಿನಾಶ್ ಕೆ.ಎಸ್.
(ಕೃಪೆ: ಕವನಗಳಲ್ಲಿ ಮೂಡಿದ ಗಾಂಧಿ)

# ಗಾಂಧೀಜಿ ಕಡೆದ

**ಹಿಮಾಚಲದಂತೆ ದಿಗಂತವನ್ನೆಲ್ಲಾ ಹಬ್ಬಿ ನಿಂತ ಗಾಂಧೀಜಿಯ ಅದ್ಭುತ ವ್ಯಕ್ತಿತ್ವದ ಹಿನ್ನೆಲೆಯಲ್ಲಿ ಕರಗಿ ನಿಂತ ವ್ಯಕ್ತಿತ್ವ ಕಸ್ತೂರಬಾ ಎಲೆಯ ಮರೆಯ ಹೂವಿನ ಬಾಳು ಅವರದು. ಗಿಡದ ಬಳಿ ಹೋದವರಿಗೆ ಸುಮ ಸೌರಭದ ಅಮೃತಾನುಭಾವವಾದಿತಾಗಲಿ ಆ ಕುಸುಮ ಕಣ್ಣಿಗೆ ಕಾಣದು. ಗಾಂಧೀಜಿಯ ಬಾಳು ಬೀರಿದ ಪರಿಮಳ ಕಸ್ತೂರಬಾನಿಂದ ಬಂದದ್ದು ಎಂಬುದು ಗಾಂಧೀಜಿಯೆ ಬಾಯಿಬಿಟ್ಟು ಹೇಳದೆ ಹೋಗಿದ್ದಿದ್ದರೆ ಯಾರಿಗೂ ಗೊತ್ತೇ ಆಗುತ್ತಿರಲಿಲ್ಲ. ಆದರೆ ಕಸ್ತೂರಿಯ ಪರಿಮಳವನ್ನು ಮುಚ್ಚಿಡಲು ಯಾರಿಂದ ಸಾಧ್ಯ?**

**– ಸಿದ್ದವನಹಳ್ಳಿ ಕೃಷ್ಣಶರ್ಮ**



**ಗಾ**ಂಧೀಜಿ ಆತ್ಮಕಥನ ರೀತಿಯಲ್ಲಿ ಎಂದೂ ಹೆಚ್ಚು ಮಾತಾಡರು; ಆಡಿದರೆ ಒಂದೋ ಎರಡೋ ಅದೂ ಭಾವ ಎದೆತುಂಬಿ ಬಂದಾಗ; ಬರೀ ಮಾತಿಗೇನು ಬಲುಮೆಯಿದೆ ಭಾವದ ಜೀವವಿಲ್ಲದಿದ್ದಾಗ. ಅಂಥ ಭಾವ ಎದೆತುಂಬಿ ಹೊರಸೂಸಿದ ಸಂದರ್ಭಗಳಲ್ಲಿ ಬಾಪು ಬಾ ವಿಷಯವಾಗಿ ಒಂದೊಂದು ಮಾತನಾಡಿದ್ದಾರೆ. ಅವೇ ಸಾಕು. ಅವರು ಕಸ್ತೂರಬಾಗೆ ಯಾವ ಸ್ಥಾನ ಕೊಡುತ್ತಿದ್ದರು, ಆಕೆಯ ಬಗ್ಗೆ ಅವರಿಗಿದ್ದ ಪ್ರೇಮ ಎಷ್ಟು ಆಳವಾದುದು ಎಂದು ತೋರಿಸಲು. 'ಹಿಂದೂ ಧರ್ಮ ನನ್ನ ಹೆಂಡತಿ ಇದ್ದ ಹಾಗೆ' ಎಂದು ಹೇಳಿದ್ದಾರೆ ಒಂದು ಕಡೆ ಗಾಂಧೀಜಿ. ಧರ್ಮ ಅವರಿಗೆ ಜೀವದ ಉಸಿರು, ಮೈಯ ನೆತ್ತರು ಎಂದು ಗೊತ್ತಿದ್ದವರಿಗೆ ಬಾಪೂಜಿ ಹೆಂಡತಿಗೆ ಕೊಟ್ಟ ಹಿರಿಯಸ್ಥಾನ ಎಂಥದೆಂದು ಇದರಿಂದ ಅರಿವಾಗುತ್ತದೆ. 'ನನ್ನ ಹೆಂಡತಿಯಂತೆ ನನ್ನ ಹೃದಯವನ್ನು ಕಲಕಬಲ್ಲವರು ಮತ್ತೊಬ್ಬರಿಲ್ಲ' ಎಂದಿದ್ದಾರೆ. ಅಸಹಕಾರ ಚಳುವಳಿಯ ಸಂದರ್ಭದಲ್ಲಿ, ಬಾ ಬಳಿ ಇಲ್ಲದಾಗ ಗಾಂಧೀಜಿ ಸೆರೆ ಸೇರಿದರು. ಹತ್ತಿರ ಇದ್ದವರು 'ಆಕೆಗೆ ಏನು ಹೇಳಬೇಕು?' ಎಂದದ್ದಕ್ಕೆ 'ಆಕೆಗೆ ಏನು ಹೇಳುವುದು ಆಕೆ ಧೀರಸತಿ' ಎಂದು ಮೆಚ್ಚಿಗೆಯ ಮುಕುಟವಿಟ್ಟರು ಹೆಂಡತಿಯ ತಲೆಯ ಮೇಲೆ.

ತಮ್ಮ ಆತ್ಮಕಥೆಯಲ್ಲಿ ವಿವಾಹದ ವಿಷಯವನ್ನು ಬರೆಯುತ್ತಾ ಗಾಂಧೀಜಿ 'ಮದುವೆಯಾದಾಗ ನಮ್ಮಿಬ್ಬರಿಗೂ ಒಂದೇ



ವಯಸ್ಸು ಆದರೂ ಮದುವೆಯಾದ ಕೂಡಲೇ ನಾನು ಪತಿ ಪದವಿಯ ಅಧಿಕಾರ ವಹಿಸಿ 'ಆಳಲಾರಂಭಿಸಿದೆ' ಎಂದು ಬರೆದಿದ್ದಾರೆ. ಜೀವನದ ಉದ್ದಕ್ಕೂ ಬಾ ಮೇಲೆ ಗಾಂಧೀಜಿಯದು ಇದೇ ಹಿಡಿತವೇ; ಎಂದೂ ಸಡಲಿಸಲಿಲ್ಲ. ಸಹಸ್ರಾರು ರೂಪಾಯಿ ಉತ್ಪನ್ನವಿದ್ದ ಉದ್ಯೋಗವನ್ನು ಬಿಟ್ಟು ಸತ್ಯದ ಹಂಬಲಿನಿಂದ ನಿತ್ಯಸಂಕಟ. ಚಿರಯಾತನೆಗೆ ಆಹ್ವಾನ ಕೊಡುವಾಗ ಸುಖ ದುಃಖಕ್ಕೆ ಪಾಲುಗಾತಿಯಾದ ಬಾನನ್ನು ಒಂದು ಮಾತೂ ಕೇಳಲಿಲ್ಲ. ನಗರದ ಕೃತಕ ಜೀವನ ತಮಗೆ ಬೇಸರವಾಗಿ ಆಶ್ರಮಜೀವನವನ್ನು ಆರಂಭಿಸಿದಾಗ, ಹರಿಜನರನ್ನು ಮನೆಯಲ್ಲಿ ತರಲು ನಿಶ್ಚಯಿಸಿದಾಗ, ಯಾವಾಗಲೂ ಅಷ್ಟೆ. ತಮಗೆ ಸಿಹಿಯಾದದ್ದು ಹೆಂಡತಿಗೂ ಸಿಹಿಯಾಗಬೇಕು ಎಂಬ ಸರ್ವಾಧಿಕಾರ ಮನೋಭಾವ, ಬಾ ಕೂಡಾ ಹಾಗೆ ಎಂದೂ ಅವರಿಗೆ ಬೇಕಾದದ್ದು ತನಗೆ ಬೇಡ ಎಂದು ಹೇಳಿಲ್ಲ. ಗಾಂಧೀಜಿ ಬಾಳಿನಲ್ಲಿ ಮಾಡಿದ ಪ್ರಯೋಗಗಳಿಂದ, ಬಾನ ಸಂಪ್ರದಾಯಬದ್ಧ ಜೀವ ಎಷ್ಟೋ ಬಾರಿ ಬೆಚ್ಚಿಬಿದ್ದಿದೆ, ಎಷ್ಟೋ ಸಲ ಗಂಡ ಮಾಡುತ್ತಿದ್ದುದು ಸರಿಯಲ್ಲ ಎನಿಸಿದೆ, ಆದರೆ ಆತನನ್ನು ಎಂದೂ ಸ್ಪಷ್ಟವಾಗಿ ನಿಂತು ಪ್ರತಿರೋಧಿಸಿಲ್ಲ, ತನ್ನದೇ ಸರಿ ಎಂಬ ಹಠಸಾಧನೆಗೆ ಕೈ ಹಾಕಿಲ್ಲ, ಮೌನವಾಗಿ ಮಾಡುತ್ತಲೇ ಬುದ್ಧಿ ಕಲಿಸಿದ್ದಾರೆ.

ಬಾ ಗಾಂಧೀಜಿಗೆ ಗುರುವಾಗುವ ಯೋಗ್ಯತೆ ಪಡೆದರೆ, ಅದು ಗಾಂಧೀಜಿ ಆಕೆಯನ್ನು ಪಳಗಿಸಿದ್ದರ ಫಲ. ದಿವ್ಯ ವಿಗ್ರಹವಾಗಬಲ್ಲ ಮೃದುವಾದ ಅಮೃತಶಿಲೆ

**ಕಸ್ತೂರಬಾ ಸಹನೆ ಗಾಂಧೀಜಿಗೆ ಸತ್ಯಾಗ್ರಹದ ಬೆಳಕು ತೋರಿತು. ಅಹಿಂಸೆಯನ್ನು ನಂಬಿದ ನಿಶ್ಯಸ್ತ್ರರಿಗೆ ಇದಿರಾಳಿಯನ್ನು ಗೆಲ್ಲುವ ದಾರಿ ತೋರಿಸಿತು. ಗಾಂಧೀಜಿ 'ಅಹಿಂಸೆಯಲ್ಲಿ ಬಾ ನನ್ನ ಗುರು' ಎಂದಿದ್ದಾರೆ.**


# ದಿವ್ಯವಿಗ್ರಹ ಬಾ



ಅವರು. ಅದನ್ನು ಪರಿಪೂರ್ಣ ವಿಗ್ರಹವಾಗಿ ಕೆತ್ತಿದ್ದಾರೆ ಗಾಂಧೀಜಿ. ಈ ಕಾರ್ಯವನ್ನವರು ಮಮತೆ, ಮೋಹವನ್ನು ಪೂರಾ ಮರೆತು ಮಾಡಿದ್ದಾರೆ; ಹತ್ತಾರು ವಿಧಾನ ಉಪಯೋಗಿಸಿದ್ದಾರೆ. ಒಮ್ಮೆ ನಿಷ್ಠುರತೆಯ ಸಿಡಿಲು ತೂರಿದರೆ, ಮತ್ತೊಮ್ಮೆ ಮಮತೆಯ ಮಂತ್ರ ಹಾಕಿದ್ದಾರೆ. ಆಶ್ರಮವಾಸಿಗಳಿಗೆ ಅಸಂಗ್ರಹ ಮೊದಲ ನಿಯಮ. ಒಮ್ಮೆ ಏಕೋ ಇರಲಿ ಎಂದು ಬಾ ಒಂದೆರಡು ರೂಪಾಯಿ ಇಟ್ಟುಕೊಂಡಿದ್ದಾರೆ. ಈ ಅಲ್ಪ ತಪ್ಪಿಗಾಗಿ ಸಂಜೆಗೆ ಸೇರಿದ ಬಹಿರಂಗ ಪ್ರಾರ್ಥನೆ ಸಭೆಯಲ್ಲಿ, ಆಕೆಯನ್ನು ತಾಯಿ ಎಂದು ತಿಳಿದು ಗೌರವಿಸುತ್ತಿದ್ದ ಆಶ್ರಮವಾಸಿಗಳ ಎದುರಿನಲ್ಲೇ ಕಠಿಣವಾಗಿ ಛೀಮಾರಿ ಮಾಡಿಬಿಟ್ಟರು. ಆಗ ಬಾ ಎಷ್ಟು ನಾಚಿ ನೀರಾದರೋ! ಅದು ಆ ಹೆಣ್ಣು ಹೃದಯಕ್ಕೇ ಗೊತ್ತು. ಇನ್ನೊಮ್ಮೆ ಆಕೆಗಾಗಿ ತಾವು ಉಪ್ಪನ್ನು ಬಿಟ್ಟು ಮಮತೆಯ ಮೋಡಿ ಹಾಕಿದರು. ಕಠಿಣವಾದ ಉಳಿಯ ಪೆಟ್ಟಂತೂ ಕೋಟಿ ಬಿದ್ದಿವೆ. ಪರಜಾತಿಯ ಗುಮಾಸ್ತನ ಎಂಜಲು ತೊಳೆಯುವಾಗ ಕಣ್ಣಲ್ಲಿ ಕಂಬನಿ ತುಂಬಿದ್ದಕ್ಕೆ, ದೂರದ ದೇಶದಲ್ಲಿ ಮನೆಬಿಟ್ಟು ಹೊರದೂಡಲು ಕುತ್ತಿಗೆಗೆ ಕೈ ಹಾಕಿದ್ದರು. ಹೀಗೆ ಗಾಂಧೀಜಿ ಕಡೆದ ದಿವ್ಯವಿಗ್ರಹ ಬಾ.

ದೇಶ ಸ್ವಾತಂತ್ರ್ಯ ಗಾಂಧೀಜಿ ಬಾಳಿನ ಗುರಿಯಾದಾಗಲೇ ಕಸ್ತೂರಬಾ ಕೂಡಾ ಆ ಕಂಕಣ ತೊಟ್ಟರು. ಎರಡು ಮೂರು ಬಾರಿ ಕಾರಾಗೃಹವಾಸದ ಬಹುಮಾನ ಕೂಡಾ ದೊರಕಿದೆ. ಕಾರಾಗೃಹವಾಸವನ್ನು ಗಾಂಧೀಜಿ ಎಷ್ಟು ಆನಂದದಿಂದ ಅಪ್ಪಿದರೋ ಬಾ ಕೂಡಾ ಅಷ್ಟೇ ಹರ್ಷದಿಂದ ಸ್ವಾಗತಿಸಿದ್ದಾರೆ. ಅದರ ಫಲವಾಗಿ ಬಂದ ದುಃಖ ನೋವುಗಳನ್ನು ನೋವಲ್ಲವೆಂಬ ಬುದ್ಧಿಯಿಂದ ಅನುಭವಿಸಿದ್ದಾರೆ. ಒಮ್ಮೆ ಬಾಪು ಸೆರೆಯಲ್ಲಿದ್ದಾಗ ಈ ಸುದ್ದಿ ತಿಳಿಸಲೇ ಕೂಡದೆಂದುಬಿಟ್ಟರು. ರಾಜಕೋಟೆ ಪ್ರಸಂಗದಲ್ಲಿ ಈ ಮುಪ್ಪಿನ ಮುದುಕಿ 'ನಾ ರಾಜಕೋಟೆಯ ಕನ್ಯೆ, ಅಲ್ಲಿನ ಸ್ಥಿತಿಗತಿ ಕೆಟ್ಟರೆ ಅದನ್ನು ನಾನು ಜೀವ ಕೊಟ್ಟಾದರೂ ಸರಿಪಡಿಸಬೇಕು' ಎಂದು ಸತ್ಯಾಗ್ರಹದ ಸುಳಿಯಲ್ಲಿ ಧುಮುಕಿಬಿಟ್ಟರು. ಕಾರಾಗೃಹವಾಸ ಅನುಭವಿಸಿದರು.

**ಬಾಪೂ ಯಾರನ್ನೂ ಹೊಗಳುವುದು ಕಷ್ಟ; ಅರ್ಹತೆ ಬಿದ್ದಾಗಲೂ ಹೊಗಳುವುದು ಅಪರೂಪ. ಎಂತಲೇ ಅಪ್ಪಿ ತಪ್ಪಿ ಅಂಥ ಮೆಚ್ಚುಗೆಯ ಮಾತು ಒಂದು ಬಂದರೆ ಅವರ ಜನ್ಮ ಪಾವನವಾಯಿತೆಂದೇ! ಈ ಅಪೂರ್ವ ಭಾಗ್ಯ ಬಾಗೆ ಹಲವಾರು ಬಾರಿ ದೊರೆತಿದೆ. ಅದಕ್ಕಾಗಿ ಆಕೆ ಸಹಿಸಬೇಕಾದ ಕಷ್ಟ ಮಾಡಬೇಕಾದ ತ್ಯಾಗ ಮಾತಿಗೂ ಮೀರಿದ್ದು.**



ನಮ್ಮಲ್ಲಿ ಎಷ್ಟೋ ಜನಕ್ಕೆ ಸೆರೆಮನೆಗೆ ಹೋಗುವುದೇ ದೊಡ್ಡ ದೇಶಸೇವೆ ಮಾಡಿದ ಹಾಗೆ ಎಂಬ ಅಭಿಪ್ರಾಯವಿದೆ. ಎಲ್ಲಕ್ಕಿಂತ ಮೊದಲು ಸೆರೆ ಸೇರೋಣ ಎಂಬುದು ಹೇಡಿತನದ ಮನೋಭಾವ. ರಣರಂಗದಲ್ಲಿ ಜೀವದ ಪಣ ತೊಟ್ಟು ಕಾದಬೇಕು.... ಹೋಗಲೇಬೇಕಾಗಿ ಬಂದರೆ ಸೆರೆಗೆ ಹೋಗಬೇಕು.

1942ರ ಆಗಸ್ಟ್ ರಾತ್ರಿ ಗಾಂಧೀಜಿಯನ್ನು ದಸ್ತಗಿರಿ ಮಾಡಲು ಬಂದ ಪೊಲೀಸ್ ಸೂಪರಿಂಟೆಂಡೆಂಟ್ ಬಾಗೆ 'ನಿಮಗೇನೂ ವಾರಂಟು ಇಲ್ಲ, ಆದರೆ ಗಾಂಧೀಜಿಯ ಜೊತೆಗೆ ಇರಬಯಸುವುದಾದರೆ ನಿಮ್ಮನ್ನೂ ಕರೆದೊಯ್ಯಬಹುದೆಂದು ಅಪ್ಪಣೆ ಆಗಿದೆ' ಎಂದು ಹೇಳಿದರು. ಆದರೆ ಬಾ ಸ್ಪಷ್ಟವಾಗಿ ಹೇಳಿದರು. 'ನಾ ಮಾಡಬೇಕಾದ ಕೆಲಸವಿದೆ, ಮುಗಿಸಿ ಬರುತ್ತೇನೆ'; ಎಂತ. ಮರುದಿನ ಬೋರೀ ಬಂದರಿನಲ್ಲಿ ಭಾಷಣ ಮಾಡುವಾಗ ದಸ್ತಗಿರಿಯಾಯಿತು. ನಗು ನಗುತ್ತಾ ಸೆರೆಗೆ ಹೋದರು. ಈ ಕರ್ತವ್ಯ ಬುದ್ಧಿನಿಷ್ಠೆ ಸತ್ಯಾಗ್ರಹದಲ್ಲಷ್ಟೇ ಅಲ್ಲ. ಬಾಳಿನ ಎಲ್ಲ ವಿಷಯದಲ್ಲೂ ಬಾ ಯಾವಾಗಲೂ ಕರ್ತವ್ಯಕ್ಕೆ ಅಗ್ರಸ್ಥಾನ ಕೊಟ್ಟಿದ್ದಾರೆ;

ಇದೆಲ್ಲಕ್ಕಿಂತ ದೊಡ್ಡ ತ್ಯಾಗ ಕಸ್ತೂರಬಾ ಸಂಸಾರ ಸುಖವನ್ನೇ ಬಿಟ್ಟುಕೊಟ್ಟದ್ದು. ದೀರ್ಘಕಾಲ ದಾಂಪತ್ಯ ಜೀವನವನ್ನು ನಡೆಸಿದ ಬಳಿಕ ಗಾಂಧೀಜಿ ಬ್ರಹ್ಮಚರ್ಯದ ವ್ರತ ಹಿಡಿದಾಗ ಕಸ್ತೂರಬಾ ಹಿಂದುಮುಂದು ನೋಡದೆ ತಾನೂ ಅದಕ್ಕೆ 'ಹುಂ' ಎಂದು ಪೂರ್ಣ ಮನಸ್ಸಿನಿಂದ ಸಮ್ಮತಿಸಿದರು. ಪತ್ನಿ ಭೋಗದ ದಾಸಿಯಾಗದೆ, ಪ್ರೇಮದ ಸಹಧರ್ಮಿಣಿಯಾಗಿದ್ದಾಳೆ; ಇದೊಂದು ಕ್ರಾಂತಿಕಾರಿಯಾದ ಪವಾಡ. ಕಸ್ತೂರಬಾನ ಸಹಕಾರ, ಸಹಾನುಭೂತಿ ಇಲ್ಲದೆ ಗಾಂಧೀಜಿ ಇದನ್ನು ಮೆರೆಯಲು ಸಾಧ್ಯವಾಗುತ್ತಿರಲಿಲ್ಲ. ಎಂತಲೇ ಪ್ರಯೋಗದ ಪುಣ್ಯ ಬಾಪೂದಾದರೂ ಅದರ ಸಾರ್ಥಕತೆಯ ಕೀರ್ತಿ ಬಾನದು.

'ಭಾರತ ಸ್ವತಂತ್ರವಾಗದೆ, ನಾನಿನ್ನು ಈ ಆಶ್ರಮದಲ್ಲಿ ಕಾಲಿಡುವುದಿಲ್ಲ' ಎಂದು ಗಾಂಧೀಜಿ ಪ್ರತಿಜ್ಞೆ ಮಾಡಿ ಸಾಬರಮತಿ ಆಶ್ರಮವನ್ನು ಬಿಟ್ಟು ಅನಿಕೇತನರಾಗಿ ಅಲೆಯುತ್ತಿದ್ದಾಗ, ಈ ಸನ್ಯಾಸಿಯನ್ನು ತನ್ನ ಪ್ರೇಮ, ಭಕ್ತಿಯಿಂದ ಸೇವಾಗ್ರಾಮದ ಆಶ್ರಮದಲ್ಲಿ ನಿಲ್ಲಿಸಿದವರು ದಿವಂಗತ ಜಮುನಾಲಾಲ ಬಜಾಜರು. ಆದರೆ ಅಲ್ಲಿ ಬಂದವರಿಗೆಲ್ಲಾ ಅಡುಗೆ ಮಾಡಿ ಹಾಕಿ ಉಪಚಾರ ಮಾಡಿ ಆಶ್ರಮವನ್ನು ನಿಲ್ಲಿಸಿದವರು ಬಾ. ಗಾಂಧೀಜಿಯದು ನಿಷ್ಠೂರ ಸನ್ಯಾಸ, ತುಂಬಾ ನಿಯಮಬದ್ಧ ಜೀವನ. ಅದರಲ್ಲಿ ಎಳ್ಳುಕಾಳು ಮುಳ್ಳು ಮೊನೆಯಷ್ಟೂ ವ್ಯತ್ಯಾಸವಾಗಕೂಡದು, ಈ ದೃಷ್ಟಿಯಲ್ಲಿ ಯಂತ್ರ ವಿರೋಧಿ ಗಾಂಧೀಜಿ ತಮ್ಮ ಬಾಳನ್ನೇ ದೊಡ್ಡ ಯಂತ್ರವಾಗಿ ಮಾಡಿದ್ದಾರೆ. ಸ್ವಲ್ಪ ವ್ಯತ್ಯಾಸವಾದರೂ ಪ್ರಳಯವಾದ ಹಾಗಾಗಿ ಬಿಡುತ್ತಾರೆ. ಹೆಂಡತಿಯ ಬಯಕೆ ಸಲ್ಲಿಸಲು ಹರಿಜನರಿಗೆ ಪ್ರವೇಶವಿಲ್ಲದ ಗುಡಿಗೆ ಹೋದರೆಂದು ಮೈಯು ನೆರಳಾದ ಮಹದೇವ ದೇಸಾಯಿಯನ್ನು ಎಷ್ಟೋ ಖಂಡಿತವಾಗಿ ದಂಡಿಸಿದರು. ಆದರೆ ಈ ನಿಷ್ಠುರ ವಾತಾವರಣದಲ್ಲಿ ಬಾ ಒಂದು ಅಮೃತ ಸ್ವರ. ಇದರಿಂದಾಗಿ ದುರಂತವಾಗಬೇಕಾದ ಎಷ್ಟೋ ಸನ್ನಿವೇಶಗಳು ತಪ್ಪಿವೆ.



ಈಗ ಈ ಸೂತ್ರ ಕಾಲನ ಕತ್ತರಿಗೆ ಸಿಕ್ಕಿ ಕಿತ್ತುಹೋಗಿದೆ. 61 ವರ್ಷಗಳಿಂದ ಪಳಗಿಸಿಕೊಂಡ ಜೀವದ ಜೊತೆಗಾತಿ ಗಾಂಧೀಜಿಗೆ ಇನ್ನಿಲ್ಲ. ಇದರ ಪರಿಣಾಮ ಅವರ ಹೃದಯ ಮೇಲೆ ಹೇಗೋ ಏನೋ? ಒಂದೊಂದಾಗಿ ಸಂಸಾರ ಬಂಧನಗಳನ್ನು ಕಿತ್ತೊಗೆಯುತ್ತಿರುವ ವಿರಕ್ತ ಗಾಂಧೀಜಿ, ಇದ್ದ ಒಂದೇ ಒಂದು ಬಂಧನವೂ ಹೋಯಿತೆಂದು ಹಿಗ್ಗಬಹುದು. ಇನ್ನು ಅವರು ಮತ್ತೆ ಆಶ್ರಮ ಕಟ್ಟುತ್ತಾರೋ ಇಲ್ಲವೇ ಊರೂರು ಅಲೆಯುತ್ತ ಅನಿಕೇತನರಾಗೇ ಇದ್ದಾರೋ?

ಹೃದ್ರೋಗದಿಂದ ಹಾಸಿಗೆ ಹಿಡಿದ ಬಾಗೆ ಎಂಥ ವೈದ್ಯೋಪಚಾರ ನೀಡಿತೋ ಏನೋ, ಅಂತೂ ಸಾಯುವ ಗಳಿಗೆಯಲ್ಲಿ ಕಲ್ಕತ್ತೆಯಿಂದ ವಿಮಾನದಲ್ಲಿ ಔಷಧ ತರಿಸುವ ನಾಟಕ ಆಡಿದರು. ಆದರೆ ರೋಗ ವಿಷಮವಾದಾಗ ಬಿಡಿ ಎಂದು ದೇಶಕ್ಕೆ ದೇಶವೇ ಬೇಡಿದಾಗ 'ಪತಿ ಸಾನ್ನಿಧ್ಯವನ್ನು ತಪ್ಪಿಸುವ ಇಷ್ಟ ನಮಗಿಲ್ಲ. ಅದು ಯೋಗ್ಯವಲ್ಲ' ಎಂದು ನಮ್ಮ ದಾಸ್ಯವನ್ನು ಅಣಕಿಸಿ. ಅಪಮಾನಿಸಿ ಮಾತಾಡಿ, ಸರಿಯಾಗಿ ಔಷಧ ತರಿಸಲು ಕೊನೆಯವರೆಗೂ ತಡಮಾಡಿ ಬಾಪೂನ ಕರುಳಿಗೆ ಕೊಳ್ಳಿಕೊಟ್ಟ ಸರಕಾರ ಎಷ್ಟುಮಟ್ಟಿಗೆ ಆಕೆಗೆ ಉಪಚಾರ ಮಾಡಿತೋ? ಇದಕ್ಕೆ ಯಾರೂ ಉತ್ತರ ಹೇಳಲಾಗದ ಪ್ರಶ್ನೆ, ಅಂತೂ ನಮ್ಮ ಪುಣ್ಯ ಸವೆದು ಬಾ ಸ್ವರ್ಗಾರೋಹಣ ಮಾಡಿದರು.

ಅವರ ಮರಣದಿಂದ ದೇಶಕ್ಕೆ ತುಂಬಾ ದೊಡ್ಡ ನಷ್ಟ ಗಾಂಧೀಜಿ ಪಳಗಿಸಿದ ನಿಪುಣ ಸೈನಿಕರಲ್ಲಿ ಒಬ್ಬೊಬ್ಬರಾಗಿ ಕೈಬಿಟ್ಟು ಹೋಗುತ್ತಿದ್ದಾರೆ. ಅವರಲ್ಲಿ ಬಾ ಕೂಡಾ ಒಬ್ಬರು. ಅಂಥ ಆದರ್ಶ ಮಾತೆ, ಸತಿ, ಗೃಹಿಣಿ, ದೇಶಸೇವಿಕೆ, ಹೆಣ್ಣು–ಇನ್ನೆಲ್ಲಿ? ಅವರು ಬಿಟ್ಟು ಹೋದ ಸ್ಥಾನ ಚಿರಶೂನ್ಯ ಸಿಂಹಾಸನ.

ನಿರಕ್ಷರಕುಕ್ಷಿಯಾದರೂ, ಆತ್ಮಸಂಸಾರ ಬಲದಿಂದ ದಿವ್ಯ ಆದರ್ಶವೊಂದನ್ನು ಮೆರೆದ ಬಾ, ಪಾರ್ಥಿವದೇಹ ಹೋದರೂ ಚಿರಂಜೀವಿ. ಅಂಥ ಆತ್ಮಕ್ಕೆ ಮರಣ ಉಂಟೇ?

**(ಕೃಪೆ: ವರ್ಧಾ ಯಾತ್ರೆ)** ◆





# ಸರಳ ಜೀವನ


> ನಿಮಗೆ "ನಾನು ಅದನ್ನು ಮಾಡಬಲ್ಲೆ..." ಎಂಬ ನಂಬಿಕೆಯಿದ್ದರೆ ನಿಮಗೆ ಆರಂಭದಲ್ಲಿ ಸಾಮರ್ಥ್ಯವಿರದಿದ್ದರೂ ಕೆಲಸ ಮಾಡಲು ಪ್ರಾರಂಭಿಸಿದಾಗ ಆ ಸಾಮರ್ಥ್ಯ ಖಂಡಿತವಾಗಿಯೂ ಬರುತ್ತದೆ.
>
> – ಮಹಾತ್ಮ ಗಾಂಧಿ

**– ಗೊರೂರು ರಾಮಸ್ವಾಮಿ ಅಯ್ಯಂಗಾರ್**

**ನಾ**ನು ಭೋಗಜೀವನವನ್ನೇನೋ ಪ್ರಾರಂಭಿಸಿದ್ದೆ. ಆದರೆ ಅದು ಬಹುಕಾಲ ನಡೆಯಲಿಲ್ಲ. ನಾನು ಎಚ್ಚರಿಕೆಯಿಂದ ಮನೆಯನ್ನು ಸಾಮಾನುಗಳಿಂದ ಸಜ್ಜುಗೊಳಿಸಿದ್ದರೂ, ಅದರಿಂದ ಮೋಹಿತನಾಗಲಿಲ್ಲ. ಆ ಜೀವನವನ್ನು ನಾನು ಪ್ರಾರಂಭಿಸಿದುದೇ ತಡ, ಕೂಡಲೇ ನನ್ನ ವೆಚ್ಚಗಳನ್ನೆಲ್ಲ ಕಡಿಮೆ ಮಾಡತೊಡಗಿದೆ. ಅಗಸನಿಗೆ ತಿಂಗಳ ತಿಂಗಳೂ ಕೊಡಬೇಕಾದ ಹಣ ಹೆಚ್ಚಾಗುತ್ತಿತ್ತು. ಅವನು ಕಾಲಕ್ಕೆ ಸರಿಯಾಗಿ ಬಟ್ಟೆಗಳನ್ನು ಮಡಿಮಾಡಿ ತಂದುಕೊಡುತ್ತಿರಲಿಲ್ಲವಾಗಿ ಎರಡು ಮೂರು ಡಜನ್ ಷರ್ಟ್ ಕಾಲರುಗಳು ನನ್ನಲ್ಲಿ ಇದ್ದರೂ ನನಗೆ ಸಾಕಾಗುತ್ತಿರಲಿಲ್ಲ. ಪ್ರತಿದಿನವೂ ಮಡಿ ಮಾಡಿದ ಕಾಲರುಗಳನ್ನು ಹಾಕಿಕೊಳ್ಳಬೇಕಾಗುತ್ತಿತ್ತು. ಮತ್ತು ಷರ್ಟ್‌ಗಳನ್ನು ನಿತ್ಯವೂ ಬದಲಾಯಿಸದಿದ್ದರೂ ದಿನಬಿಟ್ಟು ದಿನ ಬದಲಾಯಿಸಬೇಕಾಗಿತ್ತು. ಇದರಿಂದ ವೆಚ್ಚ, ಒಂದಕ್ಕೆ ಇಮ್ಮಡಿಯಾಗುತ್ತಿತ್ತು. ಅದು ಅನಾವಶ್ಯಕ ವೆಂದು ನನಗೆ ತೋರಿತು. ಈ ಹಣವನ್ನು ಉಳಿಸಲು ನಾನೇ ಒಗೆಯುವ ಉಪಕರಣಗಳನ್ನು ಒದಗಿಸಿಕೊಂಡೆ. ಬಟ್ಟೆಗಳನ್ನು ಮಡಿಮಾಡುವ ವಿಷಯವನ್ನು ಕುರಿತು ಒಂದು ಪುಸ್ತಕವನ್ನು ನಾನು ಕೊಂಡುಕೊಂಡೆ. ಅದನ್ನು ಅಧ್ಯಯನ ಮಾಡಿ ನನ್ನ ಹೆಂಡತಿಗೂ ಹೇಳಿಕೊಟ್ಟೆ. ಇದರಿಂದ ನನ್ನ ಕೆಲಸವೇನೋ ಹೆಚ್ಚಾಯಿತು. ಆದರೆ ಈ ಹೊಸ ಉದ್ಯಮದಿಂದ ಮನಸ್ಸಿಗೆ ಆನಂದವೂ ಆಗುತ್ತಿತ್ತು.

ನಾನೇ ಸ್ವತಃ ಮಡಿಮಾಡಿದ ಮೊದಲನೆಯ ಕಾಲರನ್ನು ಎಂದಿಗೂ ಮರೆಯಲಾರೆ. ನಾನು ಬೇಕಾದುದಕ್ಕಿಂತ ಹೆಚ್ಚು ಗಂಜಿಯನ್ನು ಹಾಕಿಬಿಟ್ಟಿದ್ದೆ. ಇಸ್ತ್ರಿಪೆಟ್ಟಿಗೆಯನ್ನು ಎಷ್ಟು ಬೇಕೋ ಅಷ್ಟು ಬಿಸಿ ಮಾಡಿರಲಿಲ್ಲ. ಕಾಲರು ಎಲ್ಲಿ ಸುಟ್ಟು ಹೋಗುವುದೋ ಎಂದು ನನಗೆ ಭಯವಾಗಿದ್ದುದರಿಂದ, ಇಸ್ತ್ರಿಪೆಟ್ಟಿಗೆಯನ್ನು ಚೆನ್ನಾಗಿ ಊರಿ ಇಸ್ತ್ರಿ ಮಾಡಲಿಲ್ಲ. ಇದರ ಫಲವಾಗಿ ಕಾಲರು ತಕ್ಕಮಟ್ಟಿಗೆ ಬಿರುಸಾಗಿದ್ದರೂ ಅದರಿಂದ ಹಿಟ್ಟು ಉದುರುತ್ತಲೇ ಇದ್ದಿತು. ಆ ಕಾಲರನ್ನೇ ಧರಿಸಿಕೊಂಡು ನಾನು ಕೋರ್ಟ್‌ಗೆ ಹೋಗಿ ಇತರ ಬ್ಯಾರಿಸ್ಟರ್‌ಗಳ ಅಪಹಾಸ್ಯಕ್ಕೆ ಗುರಿಯಾದೆ. ಆ ಕಾಲದಲ್ಲಿಯೂ ಸಹ ನಾನು ಅಂತಹ ಕುಚೋದ್ಯಗಳನ್ನು ಸಹಿಸುವ ಶಕ್ತಿಯುಳ್ಳವನಾಗಿದ್ದೆ.

"ನನ್ನ ಬಟ್ಟೆಗಳನ್ನು ನಾನೇ ಮಡಿ ಮಾಡಿಕೊಳ್ಳುವುದು ಇದೇ ಮೊದಲನೆಯ ಪ್ರಯೋಗ. ಆದುದರಿಂದ ಗಂಜಿ ಹೆಚ್ಚಾಗಿ




ಹಿಟ್ಟು ಉದುರುತ್ತಿದೆ. ಇದರಿಂದ ನನಗೇನೂ ತೊಂದರೆಯಿಲ್ಲ. ಇದರಿಂದ ನಿಮ್ಮ ವಿನೋದಕ್ಕೆ ಇಷ್ಟೊಂದು ಅವಕಾಶವಾಯಿತಲ್ಲ, ಅದೂ ಒಂದು ಲಾಭವೇ", ಎಂದು ನಾನು ವಿವರಿಸಿದೆ.


ಒಬ್ಬ ಮಿತ್ರರು, "ಆದರೆ ಇಲ್ಲಿ ಅಗಸರು ಇಲ್ಲದೆ ಬರಗಾಲ ಬಂತೆ?" ಎಂದು ಕೇಳಿದರು. ನಾನು ಹೇಳಿದೆ. "ಅಗಸರವನಿಗೆ ಕೊಡುವ ಹಣ ಬಹಳ ಹೆಚ್ಚಾಗುತ್ತಿದೆ.


ಒಂದು ಕಾಲರನ್ನು ಮಡಿಮಾಡುವ ಕೂಲಿ ಆ ಕಾಲರಿನ ಬೆಲೆಯಷ್ಟೇ ಆಗುತ್ತಿದೆ. ಜತೆಗೆ ನಾವು ಯಾವಾಗಲೂ ಅಗಸನ ಮೇಲೆಯೇ ಅವಲಂಬಿಸಿರಬೇಕಾಗುತ್ತದೆ. ಆದುದರಿಂದ ನನ್ನ ವಸ್ತ್ರಗಳನ್ನು ನಾನೇ ಮಡಿ ಮಾಡಿಕೊಳ್ಳುವುದು ಒಳ್ಳೆಯದೆಂದು ನನಗೆ ತೋರುತ್ತದೆ".

ಆದರೆ ನನ್ನ ಮಿತ್ರರಿಗೆ ಈ ಸ್ವಾವಲಂಬನ ಸುಖ ಅರ್ಥವಾಗಲಿಲ್ಲ. ಸ್ವಲ್ಪ ಕಾಲದೊಳಗೆ ನಾನು ನನ್ನ ಬಟ್ಟೆಗಳಿಗೆ ನಿಪುಣನಾದ "ಅಗಸ"ನೇ ಆದೆ. ನಾನು ಮಡಿ ಮಾಡುತ್ತಿದ್ದುದು, ಅಗಸರ ಮಡಿಗೆ ಯಾವ ವಿಧದಲ್ಲಿಯೂ ಕಡಿಮೆಯಾಗಲಿಲ್ಲ. ನನ್ನ ಕಾಲರುಗಳು ಇತರರು ಧರಿಸುತ್ತಿದ್ದ ಕಾಲರುಗಳಿಗಿಂತ ಗಟ್ಟಿಯಲ್ಲಿಯೂ ಹೊಳಪಿನಲ್ಲಿಯೂ ಕಡಿಮೆಯಾಗಿರಲಿಲ್ಲ.




ಗೋಖಲೆ


ಮಹದೇವ ಗೋವಿಂದ ರಾನಡೆ



ಗೋಖಲೆಯವರು ದಕ್ಷಿಣ ಆಫ್ರಿಕಾಕ್ಕೆ ಬಂದಾಗ, ಅವರ ಹತ್ತಿರ ಮಹದೇವ ಗೋವಿಂದ ರಾನಡೆಯವರು ಜ್ಞಾಪಕಾರ್ಥವಾಗಿ ಕೊಟ್ಟಿದ್ದ ಒಂದು ಅಂಗವಸ್ತ್ರವಿತ್ತು. ಈ ನೆನಪಿನ ಗುರುತನ್ನು ಗೋಖಲೆಯವರು ಬಹಳ ಜೋಪಾನವಾಗಿಟ್ಟುಕೊಂಡು ಅದನ್ನು ವಿಶೇಷ ಸಂದರ್ಭಗಳಲ್ಲಿ ಮಾತ್ರ ಧರಿಸುತ್ತಿದ್ದರು. ಜೋಹಾನ್ಸ್‌ಬರ್ಗ್ ಭಾರತೀಯರು ಅವರಿಗೆ ಔತಣ ಕೂಟವನ್ನು ಏರ್ಪಡಿಸಿದುದು ಅಂತಹ ವಿಶೇಷ ಸಮಾರಂಭವಾಗಿತ್ತು. ಅಂಗವಸ್ತ್ರ ಇಸ್ತ್ರಿ ಮಾಡಬೇಕಾಗಿತ್ತು. ಅದನ್ನು ಅಗಸನಲ್ಲಿಗೆ ಕಳುಹಿಸಿ, ಸಕಾಲದಲ್ಲಿ ಹಿಂದಕ್ಕೆ ತರಿಸಲು ಸಮಯವಿರಲಿಲ್ಲ. ನಾನು ಇಸ್ತ್ರಿ ಮಾಡಿಕೊಡುತ್ತೇನೆಂದು ಗೋಖಲೆಯವರಿಗೆ ಹೇಳಿದೆ.

ಗೋಖಲೆಯವರು, "ವಕೀಲಿ ವೃತ್ತಿಯಲ್ಲಿ ನೀವು ಗಟ್ಟಿಗರೆಂದು ನಂಬಬಲ್ಲೆ. ಆದರೆ ಅಗಸನಾಗಿ ನಿಮ್ಮನ್ನು ನಂಬಲಾರೆ. ನೀವು ಇದನ್ನು ಕೆಡಿಸಿಬಿಟ್ಟರೆ? ಈ ಅಂಗವಸ್ತ್ರ ನನಗೆ ಎಷ್ಟು ಬೆಲೆಯಾದುದೆಂದು ನಿಮಗೆ ಗೊತ್ತೆ?" ಎಂದು ಕೇಳಿದರು.

ಅವರು ತಮಗೆ ಆ ವಸ್ತ್ರವನ್ನು ರಾನಡೆಯವರು ಕೊಟ್ಟ ಕಥೆಯನ್ನು ಬಹಳ ಉಲ್ಲಾಸದಿಂದ ಹೇಳಿದರು. ಆದರೂ ನಾನು ಒತ್ತಿ ಹೇಳಿ ಚೆನ್ನಾಗಿ ಕೆಲಸ ಮಾಡುವುದಾಗಿ ಆಶ್ವಾಸನೆ ಕೊಟ್ಟು ಅವರ ಅನುಮತಿಯನ್ನು ಪಡೆದು ಅದನ್ನು ಇಸ್ತ್ರಿ ಮಾಡಿ ಅವರಿಂದ ಮೆಚ್ಚುಗೆಯನ್ನು ಪಡೆದೆ. ಅನಂತರ, ಜಗತ್ತೆಲ್ಲ ನನಗೆ ಮೆಚ್ಚುಗೆಯನ್ನು ಕೊಡದಿದ್ದರೂ ನಾನು ಚಿಂತಿಸುವವನಾಗಿರಲಿಲ್ಲ.



ಅಗಸರವನ ಮೇಲೆ ನನ್ನ ಅವಲಂಬನೆಯನ್ನು ತಪ್ಪಿಸಿಕೊಂಡಂತೆ ನಾನು ಕ್ಷೌರಿಕನ ಕೈಯಿಂದಲೂ ತಪ್ಪಿಸಿಕೊಂಡೆ. ಇಂಗ್ಲೆಂಡಿಗೆ ಹೋಗುವವರೆಲ್ಲ, ಮುಖ ಕ್ಷೌರಮಾಡಿಕೊಳ್ಳುವುದನ್ನು ಕಲಿತುಕೊಳ್ಳುತ್ತಾರೆ. ಆದರೆ ಸ್ವಂತವಾಗಿ ಕೂದಲನ್ನು ಕತ್ತರಿಸಿಕೊಳ್ಳುವುದನ್ನು ಕಲಿತವರು ನನಗೆ ತಿಳಿಯದು. ನಾನು ಅದನ್ನೂ ಕಲಿಯಬೇಕಾಗಿತ್ತು. ನಾನು ಪ್ರಿಟೋರಿಯಾದಲ್ಲಿ ಒಂದು ಬಾರಿ ಇಂಗ್ಲಿಷ್ ಕ್ಷೌರಿಕನ ಅಂಗಡಿಗೆ ಹೋದೆನು. ಅವನು ನನ್ನ ಕೂದಲನ್ನು ಕತ್ತರಿಸಲು ಒಪ್ಪಲಿಲ್ಲ. ಅವನು ತೋರಿಸಿದ ತಿರಸ್ಕಾರ ಅಸಹನೀಯವಾಗಿತ್ತು. ನನಗೆ ಬಹಳ ದುಃಖ ಉಂಟಾಯಿತು. ನಾನು ಕೂಡಲೇ ಅಂಗಡಿಗೆ ಹೋಗಿ ಕತ್ತರಿಯನ್ನು ಕೊಂಡುಕೊಂಡು ಬಂದು ಕನ್ನಡಿಯ ಮುಂದೆ ನಿಂತುಕೊಂಡು ನನ್ನ ಕೂದಲನ್ನು ಸ್ವಲ್ಪ ಹೆಚ್ಚು ಕಡಿಮೆ ಸರಿಯಾಗಿಯೇ ಕತ್ತರಿಸಿದೆ. ಆದರೆ ಹಿಂಭಾಗದಲ್ಲಿ ಕೆಟ್ಟು ಹೋಯಿತು. ಕೋರ್ಟ್‌ನಲ್ಲಿ ಮಿತ್ರರೆಲ್ಲ ಬಿದ್ದು ಬಿದ್ದು ನಕ್ಕರು.




"ಗಾಂಧೀ, ನಿಮ್ಮ ಕೂದಲಿಗೆ ಏನಾಗಿದೆ? ಅದನ್ನು ಇಲಿಗಳು ತಿಂದಂತೆ ಕಾಣುತ್ತಿದೆಯಲ್ಲ?'

"ಇಲ್ಲ, ಬಿಳಿಯ ಕ್ಷೌರಿಕ ನನ್ನ ಕಪ್ಪು ತಲೆಕೂದಲನ್ನು ಹೇಗೆ ಮುಟ್ಟಿಯಾನು ಆದುದರಿಂದ ನಾನೇ ಅದನ್ನು ಕತ್ತರಿಸಿಕೊಂಡೆ. ಎಷ್ಟು ಕೆಟ್ಟು ಹೋದರೂ ಚಿಂತೆಯಿಲ್ಲ" ಎಂದು ಉತ್ತರ ಕೊಟ್ಟೆ. ಈ ಉತ್ತರದಿಂದ ಮಿತ್ರರಿಗೆ ಆಶ್ಚರ್ಯವಾಗಲಿಲ್ಲ.

ನನ್ನ ಕೂದಲನ್ನು ಕತ್ತರಿಸುವುದಕ್ಕೆ ನಿರಾಕರಿಸಿದುದರಲ್ಲಿ ಕ್ಷೌರಿಕನದೇನೂ ತಪ್ಪು ಇರಲಿಲ್ಲ. ಅವನು ಕಪ್ಪು ಜನರ ಸೇವೆ ಮಾಡಿದ್ದರೆ, ಅವನ ಬಿಳಿಯ ಗಿರಾಕಿಗಳೆಲ್ಲ ಅವನನ್ನು ಬಿಟ್ಟು ಹೋಗುವ ಸಂಭವವಿದ್ದಿತು. ನಾವು ನಮ್ಮ ಕ್ಷೌರಿಕರು ನಮ್ಮ ದೇಶದ ಅಸ್ಪೃಶ್ಯ ಬಂಧುಗಳಿಗೆ ಕ್ಷೌರ ಮಾಡಲು ಅವಕಾಶ ಕೊಡುವುದಿಲ್ಲ. ನನಗೆ ಇದಕ್ಕಾಗಿ ದಕ್ಷಿಣ ಆಫ್ರಿಕಾದಲ್ಲಿ ಒಂದು ಸಲವಲ್ಲ, ಅನೇಕ ಸಲ ತಕ್ಕ ಶಿಕ್ಷೆ ದೊರಕಿತು. ಇದು ನಮ್ಮ ಪಾಪಕ್ಕೆ ಪ್ರಾಯಶ್ಚಿತ್ತವೆಂಬುದು ನನಗೆ ಮನವರಿಕೆಯಾಗಿದ್ದುದರಿಂದ ನನಗೆ ಅದರಿಂದ ಕೋಪ ಬರಲಿಲ್ಲ.


ಸ್ವಾವಲಂಬನೆ ಮತ್ತು ಸರಳತೆಯ ನನ್ನ ಇಚ್ಛೆ ಎಂತಹ ತೀವ್ರ ಸ್ವರೂಪದಲ್ಲಿ ಕೊನೆಗೆ ಪ್ರಕಟವಾಯಿತೆಂಬ ಸಂಗತಿಗಳು, ಮುಂದೆ ಸರಿಯಾದ ಸ್ಥಳದಲ್ಲಿ ವಿವರಿಸಲ್ಪಡುವುವು. ಆದರೆ ಅದರ ಬೀಜಾರೋಪಣ ಬಹಳ ಹಿಂದೆಯೇ ಆಗಿತ್ತು. ಬೇರು ಬಿಟ್ಟು, ಹೂವು ಹಿಡಿದು ಫಲ ಬಿಡಲು ನೀರೆರೆಯುವುದು ಮಾತ್ರ ಅವಶ್ಯಕವಾಗಿತ್ತು. ಈ ನೀರೆರೆಯುವುದೂ ಸಕಾಲದಲ್ಲಿ ಉಂಟಾಯಿತು. ◆




ದಿನಚರಿ ಎನ್ನುವುದನ್ನು ಸಾಮಾನ್ಯರು ಬರೆಯುವುದು ಬಹಳ ಕಡಿಮೆ, ಇಲ್ಲವೇ ಇಲ್ಲ ಎಂದೇ ಹೇಳಬೇಕು. ಆದರೆ ಗಾಂಧೀಜಿ ಹಾಗೆ ಭಾವಿಸುತ್ತಿರಲಿಲ್ಲ. ಯಾರೇ ಆದರೂ ದಿನಚರಿ ಬರೆಯಬೇಕು ಎನ್ನುವುದು ಅವರ ಅಭಿಪ್ರಾಯ. "ಕ್ರಮವಾಗಿ ದಿನಚರಿಯನ್ನು ಬರೆಯಬೇಕು. ಅಂದಂದು ನಡೆದ ಘಟನೆಯನ್ನು ಅಂದಂದೇ ಬರೆದಿಡಬೇಕು. ಹೇಳಿದ ಕೇಳಿದ ಮಾತುಗಳಲ್ಲಿ, ನಡೆದುದನ್ನು ನಿರೂಪಿಸುವುದರಲ್ಲಿ ಸ್ವಲ್ಪವೂ ವ್ಯತ್ಯಾಸವಾಗಬಾರದು" ಎನ್ನುತ್ತಿದ್ದ ಗಾಂಧೀಜಿ ಸುಶೀಲಾ, ಮಹದೇವ್, ಮನು ಎಲ್ಲರಿಗೂ ದಿನಚರಿ ಬರೆಯಲು ಹೇಳುತ್ತಿದ್ದರು.

ಒಮ್ಮೆ ಮೊಮ್ಮಗಳು ಮನು ದಿನಚರಿ ಬರೆಯಲು ಬೇಸರ ಮಾಡಿಕೊಂಡಾಗ ಅವಳ ಬೇಸರಕ್ಕೆ ಕಾರಣ ಕೇಳಿದರು. ಅದಕ್ಕೆ ಅವಳು "ಬಾಪೂ, ನಾನು ದಿನಚರಿ ಬರೆದರೆ ಅದನ್ನು 'ಪ್ಯಾರೆಲಾಲರಿಗೆ ತೋರಿಸು. ಅವರು ಪಂಡಿತರು, ಅದನ್ನು ಸುಧಾರಿಸುತ್ತಾರೆ' ಎಂದಿರಿ ನೀವು, ನಾನು ನಿನ್ನೆ ದಿನಚರಿಯನ್ನು ಬರೆದರೆ 'ಅದು ಬೇರೆಯವರ ಕೈ ಸೇರದಂತೆ ನೀನು ಎಚ್ಚರವಾಗಿರಬೇಕು. ಬೇರೆಯವರ ಕೈ ಸೇರಿದರೆ ಅದರ ದುರುಪಯೋಗವಾದರೂ ಆದೀತು' ಎಂದೂ ನೀವೇ ಹೇಳಿದಿರಿ. ದಿನಚರಿಯನ್ನು ಬೇರೆಯವರಿಗೆ ತೋರಿಸುವುದು ನನಗೂ ಇಷ್ಟವಿಲ್ಲ. ಆಕಸ್ಮಾತ್ ತೋರಿಸಿದರೂ ಪ್ಯಾರೆಲಾಲರಂಥ ಪಂಡಿತರಿಗೆ ತೋರಿಸಿದಾಗ ನಾನು ಅದನ್ನು ಸರಿಯಾಗಿ ಬರೆಯದಿದ್ದರೆ ಅವರು ನನ್ನನ್ನು ಗೇಲಿ ಮಾಡಿ ನಗಾಡುವುದಿಲ್ಲವೇ?" ಎಂದಳು.

"ಓಹೋ ನಿನ್ನನ್ನು ಒಳಗೊಳಗೇ ಕಾಡುತ್ತಿರುವ ಸಮಸ್ಯೆ ಇದೆಯೇ? ಒಂದು ಮಾತು ನೆನಪಿನಲ್ಲಿಟ್ಟುಕೋ. ಅವರು ಗೇಲಿ ಮಾಡಿದರೆ ಅದರಿಂದ ನೀನು ಪಾಠ ಕಲಿಯಬೇಕು. ಅವರು ಏನು ಹೇಳುತ್ತಾರೆಯೋ ಎನ್ನುವ ಭಯ ನಿನಗೆ ಇರಬಾರದು. ಒಳ್ಳೆಯದಾದೀತೋ, ಕೆಟ್ಟದಾದೀತೋ ಎಂದು ಯೋಚಿಸುತ್ತಾ ಕುಳಿತರೆ ನಾವು 'ಪುರುಷಾರ್ಥಹೀನ'ರಾಗಿ ಯಾವ ವಿಷಯದಲ್ಲಿಯೂ ಒಂದು ಹೆಜ್ಜೆಯನ್ನು ಮುಂದಿಡಲು ಸಾಧ್ಯವಿಲ್ಲ. ಏನನ್ನು ಸಾಧಿಸಲೂ ಸಾಧ್ಯವಿಲ್ಲ. ನಾವು ಸಾಹಸಿಗಳಾಗಿ ಇರಬೇಕು ಮನು. ನಡೆ-ನುಡಿಗಳು ಒಂದಾಗಿರಬೇಕು. ಅದಕ್ಕೆ ಸಹಾಯ ಮಾಡುವುದು ದಿನಚರಿ. ಒಳ್ಳೆಯದನ್ನು ಕಲಿಸಿದಾಗ ಸ್ವಾಗತಿಸಬೇಕು.. ಚಿಕ್ಕವರೂ ನಮಗೆ ಪಾಠ ಕಲಿಸುತ್ತಾರೆ. ಅದನ್ನು ನಾವು ಕಲಿತಿಲ್ಲದಿದ್ದರೆ ಕಲಿಯಲೇಬೇಕಾಗುತ್ತದೆ... ನಾನು ಆಗಾಖಾನ್ ಸೆರೆಮನೆಯಲ್ಲಿದ್ದಾಗ ಸುಶೀಲಾ ದಿನಚರಿ ಬರೆಯುತ್ತಿದ್ದಳು. ನನ್ನ ಅಭಿಪ್ರಾಯದಲ್ಲಿ ಅದೊಂದು ಐತಿಹಾಸಿಕ ದಾಖಲೆ... ಬಹಳ ಬೆಲೆಬಾಳುವಂಥದ್ದು. ಈಗ ನಿನಗೊಂದು ವಿಷಯ ಹೇಳುತ್ತೇನೆ ಕೇಳು" ಎಂದು ಗಾಂಧೀಜಿ ಮೊಮ್ಮಗಳಿಗೆ ತಾವು ಪಾಠ ಕಲಿತ ಸನ್ನಿವೇಶವೊಂದರ ಬಗೆಗೆ ಹೇಳಿದರು.


ಮಹದೇವ್, ಗಾಂಧೀಜಿ



ಸುಶೀಲಾ

"ನಾನು ಜೊಹಾನ್ಸ್‌ಬರ್ಗ್‌ದ ಮ್ಯಾಜಿಸ್ಟ್ರೇಟರ ಮುಂದೆ ಒಂದು ಮೊಕದ್ದಮೆಯಲ್ಲಿ ವಾದ ಮಾಡುತ್ತಿದ್ದಾಗ ಕಕ್ಷಿದಾರನು ನನಗೆ ಮೋಸಮಾಡಿದ್ದಾನೆಂದು ತಿಳಿಯಿತು. ಸಾಕ್ಷಿ ಹೇಳುವಾಗ ಅವನ ತಪ್ಪು ನನಗೆ ಸ್ಪಷ್ಟವಾಗಿ ಗೊತ್ತಾಯಿತು. ನಾನು ಆ ಕೂಡಲೆ ನನ್ನ ವಾದವನ್ನು ನಿಲ್ಲಿಸಿ, ಆ ಮೊಕದ್ದಮೆಯನ್ನು ವಜಾ ಮಾಡುವಂತೆ ಮ್ಯಾಜಿಸ್ಟ್ರೇಟರನ್ನು ಕೇಳಿದೆ. ಇದನ್ನು ಕಂಡು ಪ್ರತಿಪಕ್ಷದ ಲಾಯರು ಬಹಳ ಆಶ್ಚರ್ಯಪಟ್ಟರು. ಮ್ಯಾಜಿಸ್ಟ್ರೇಟರು ಸಂತೋಷಪಟ್ಟರು.

ನನ್ನ ಈ ಸತ್ಯದ ಪರಾಯಣತೆ ನನ್ನ ಸಹೋದ್ಯೋಗಿಗಳಲ್ಲಿ ನನ್ನ ಗೌರವ, ಯಶಸ್ಸನ್ನು ಹೆಚ್ಚಿಸಿತು... ಈಗ ಹೇಳು... ತಡವಾಗಿ ತಿಳಿದರೂ ನಾನು ಸುಳ್ಳು ಕಕ್ಷಿದಾರನ ಪರವನ್ನೇ ವಹಿಸದೆ, ನನ್ನ ತಪ್ಪನ್ನು ತಿದ್ದಿಕೊಂಡು ಮೊಕದ್ದಮೆಯನ್ನು ವಜಾ ಮಾಡುವಂತೆ ಹೇಳಿದ್ದು ತಪ್ಪೇ? ನಾ ಪಾಠ ಕಲಿತುಕೊಂಡು ಸತ್ಯನಿಷ್ಠನಾಗಿಯೇ ಉಳಿದದ್ದು ತಪ್ಪೇ? ಮನು... ನಮಗೆ ವ್ಯಕ್ತಿಗಳು, ಸಂದರ್ಭಗಳು ಕಲಿಸುವ ಪಾಠ ದೇವರೇ ಆ ಮೂಲಕ ಕಲಿಸಿದ್ದಾನೆಂದು ತಿಳಿದುಕೊಳ್ಳಬೇಕು...!"ಎಂದಾಗ ಮೊಮ್ಮಗಳು ಸಮ್ಮತಿಸಿದಳು! ◆


ಮನು, ಗಾಂಧೀಜಿ

# ಜ್ಞಾನದ ದೀವಿಗೆ ಹಚ್ಚಿದ



**ಬಸವಣ್ಣನವರು ಒಬ್ಬ ಮಹಾನ್ ಸಮಾಜ ಸುಧಾರಕ ಮತ್ತು ತತ್ವಜ್ಞಾನಿ. ಇವರು ವಚನಗಳ ಮೂಲಕ ಸಾಮಾಜಿಕ ಜಾಗೃತಿಯನ್ನುಂಟು ಮಾಡಿದರು. ಬಿಜ್ಜಳನ ರಾಜ್ಯದ ಮುಖ್ಯಮಂತ್ರಿಯಾಗಿದ್ದ ಬಸವಣ್ಣನವರು 'ಅನುಭವ ಮಂಟಪ'ವನ್ನು ಪ್ರಾರಂಭಿಸಿದರು. ಅಲ್ಲಮಪ್ರಭು, ಅಕ್ಕಮಹಾದೇವಿ, ಮಾದಾರ ಚೆನ್ನಯ್ಯ ಮುಂತಾದ ಶರಣರು ಎಲ್ಲಾ ವರ್ಗದ ಜನರು ಜೀವನದ ಆಧ್ಯಾತ್ಮಿಕ ವಿಷಯಗಳನ್ನು ಮುಕ್ತವಾಗಿ ಚರ್ಚಿಸಲು ಸಾಮಾನ್ಯ ಕೇಂದ್ರವಾಯಿತು.**

ಬಸವಣ್ಣನವರು ದೇಶದ ಅತ್ಯುತ್ತಮ ಸಮಾಜ ಸೇವಕರಲ್ಲಿ ಒಬ್ಬರು. ಕರ್ನಾಟಕದಲ್ಲಿ ಭಕ್ತಿ ಚಳುವಳಿಗಳಲ್ಲಿ ಎರಡು ಪ್ರಾಥಮಿಕ ವರ್ಗಗಳಿದ್ದವು. ಭಕ್ತಿ ಚಳುವಳಿಯ ಮೊದಲ ರೂಪವನ್ನು ಮಾದಾರ ಚೆನ್ನಯ್ಯ ಪ್ರಾರಂಭಿಸಿದರು. ನಂತರ ಬಸವಣ್ಣ ಅದನ್ನು ಮುಂದುವರಿಸಿದರು.

ಭಕ್ತಿ ಚಳುವಳಿಯ ಎರಡನೇ ರೂಪವು ವಚನ ಸಾಹಿತ್ಯವನ್ನು ಆಧರಿಸಿದೆ. ಈ ಸುಧಾರಣೆಗಳ ಮೂಲಕ ಸಮಾಜದಲ್ಲಿ ಅನೇಕ ಬದಲಾವಣೆಗಳನ್ನು ತರಲಾಯಿತು.


ಬಸವಣ್ಣನವರು ತಮ್ಮ ಗುರುಗಳೊಂದಿಗೆ ಕೂಡಲ ಸಂಗಮದಲ್ಲಿ ಹತ್ತು ವರ್ಷಗಳನ್ನು ಕಳೆದರು. ಆತ 18 ವರ್ಷ ವಯಸ್ಸಿನ ಯುವಕನಾಗಿದ್ದ. ಅವರು ವೇದ, ಪುರಾಣ, ಶಾಸ್ತ್ರ ಇತ್ಯಾದಿಗಳ ಅಧ್ಯಯನವನ್ನು ಪೂರ್ಣಗೊಳಿಸಿದ್ದರು.

ಭಕ್ತಿ ಮಾರ್ಗವನ್ನು ಬಸವಣ್ಣನವರು ಬೆಂಬಲಿಸಿದರು. ಅವರು "ಜಾತಿ, ಬಣ್ಣ ಮತ್ತು ಆರ್ಥಿಕ ಸ್ಥಾನಮಾನದ ಹೊರತಾಗಿಯೂ ಎಲ್ಲರೂ ಸಮಾನರು" ಎಂದು ಹೇಳಿದರು. ಇವರು ಸಮಾಜದ ಕೆಟ್ಟ ಅಭ್ಯಾಸಗಳ ವಿರುದ್ಧ ಹೋರಾಡಿದರು ಮತ್ತು ತಮ್ಮ ಆಳವಾದ ಸಾಮಾಜಿಕ ಜ್ಞಾನ ಮತ್ತು ಕಾವ್ಯದ ಮೂಲಕ ಸಮಾಜವನ್ನು ಬದಲಾಯಿಸಲು ಪ್ರಯತ್ನಿಸಿದರು.

ಜಾತಿ–ಧರ್ಮ ಬೇಧವಿಲ್ಲದೆ ಸಮಾಜದಲ್ಲಿ ಹಲವಾರು ಸುಧಾರಣೆಗಳನ್ನು ತಂದರು. ಎಲ್ಲರಿಗೂ ಸಮಾನವಾಗಿ ಬದುಕುವ ಹಕ್ಕನ್ನು ಕಲ್ಪಿಸಿ ಸಮಾಜಕ್ಕೆ ಉತ್ತಮ ಸಂದೇಶ ನೀಡಿದರು.

ಯಾವ ಧರ್ಮ ದಯೆಯನ್ನು ನಂಬುವುದಿಲ್ಲ ಎಂದು ಬಸವಣ್ಣ ಪ್ರಶ್ನಿಸಿದರು. ದಯೆ ಎಲ್ಲಾ ಧರ್ಮಗಳ ಆಧಾರವಾಗಿದೆ ಎಂದು ಅವರು ಪ್ರತಿಪಾದಿಸಿದರು.

ನಮ್ಮ ಜೀವನ ಸುಂದರವಾಗಬೇಕಾದರೆ ಸನ್ಮಾರ್ಗದಲ್ಲಿ ಬದುಕನ್ನು ಕಟ್ಟಿಕೊಳ್ಳಬೇಕು. ಹಣ, ಅಧಿಕಾರ, ಸಂಪತ್ತು ಯಾವುದೂ ಶಾಶ್ವತವಲ್ಲ. ಸಾಧಕರ ಸಾಲಿನಲ್ಲಿ ನಿಲ್ಲುವ ಯೋಗ್ಯತೆ ಸಂಪಾದಿಸದಿದ್ದರೂ ಅವರ ಹಾದಿಯಲ್ಲಿ ಮುನ್ನಡೆದು ಉತ್ತಮ



# ಮಹಾನ್ ಮಾನವತಾವಾದಿ

– ಕೆ.ವಿ.ಪದ್ಮಾವತಿ

**ಬಸವಣ್ಣನವರ ಜೀವನ, ತತ್ತ್ವಾದರ್ಶಗಳನ್ನು ನವ ಪೀಳಿಗೆಯವರಿಗೆ ಪರಿಚಯಿಸಬೇಕು. ಕಾಯಕದಲ್ಲಿ ಎಲ್ಲರನ್ನೂ ತೊಡಗಿಸಬೇಕು. ಸತ್ಯದ ಹಾದಿಯಲ್ಲಿ ಮುನ್ನಡೆಸುವುದರೊಂದಿಗೆ ಸಮಾಜದಲ್ಲಿ ಸುಧಾರಣೆ ತರುವುದಕ್ಕೆ ಎಲ್ಲರೂ ಶ್ರಮಿಸಬೇಕಿದೆ. ಹನ್ನೆರಡನೇ ಶತಮಾನದ ಬಸವಣ್ಣ ಇಪ್ಪತ್ತೊಂದನೇ ಶತಮಾನದ ಎಲ್ಲ ಜನರಿಗೂ ಆದರ್ಶವಾಗುವಂತೆ ಮಾಡಿದಾಗ ಮಾತ್ರ ಹೊಸದೊಂದು ಇತಿಹಾಸ ಸೃಷ್ಟಿಸಲು ಸಾಧ್ಯ.**



ಬದುಕನ್ನು ಕಂಡುಕೊಂಡಾಗ ಮಹಾ ಪುರುಷರ ಸುಧಾರಣೆಗಳು ಸಾರ್ಥಕತೆ ಪಡೆದುಕೊಳ್ಳುತ್ತವೆ.

ವಿಶ್ವಗುರು ಬಸವಣ್ಣನವರು ಜನರಲ್ಲಿ ಜ್ಞಾನದ ದೀವಿಗೆ ಹಚ್ಚಿದ ಮಹಾನ್ ಮಾನವತಾವಾದಿ. ಇವರ ತತ್ತ್ವಾದರ್ಶಗಳು ಇಂದಿಗೂ ಎಲ್ಲರಿಗೂ ಪಾಠ ಮತ್ತು ಬದುಕಿಗೆ ದಾರಿದೀಪ. ವಚನಗಳ ಮೂಲಕವೇ ಸಮಾಜದಲ್ಲಿ ಬಹುದೊಡ್ಡ ಬದಲಾವಣೆ ತರಲು ಬಯಸಿದರು.

ಕರ್ನಾಟಕದ ಪಾಲಿಗೆ ಹನ್ನೆರಡನೇ ಶತಮಾನ ಎಂಬುದು ಬಹಳ ಮಹತ್ವದ್ದು. ಸಮಾಜದಲ್ಲಿ ಬಹುದೊಡ್ಡ ಬದಲಾವಣೆಯ ಹೊಸ ಚಿಂತನೆ ರೂಪುಗೊಂಡ ಕಾಲವದು. ಕನ್ನಡ ಸಾಹಿತ್ಯ ಮತ್ತು ಸಾಂಸ್ಕೃತಿಕ ಇತಿಹಾಸದಲ್ಲಿ ವಿಶಿಷ್ಟವಾದ ಕಾಲಘಟ್ಟವಿದು.

ಸಾಮಾಜಿಕ ಅಸಮಾನತೆ, ಜಾತಿ ವ್ಯವಸ್ಥೆ ಸೇರಿದಂತೆ ಹಲವು ಅನಿಷ್ಟ ಪದ್ಧತಿಗಳು ಆಚರಣೆಯಲ್ಲಿದ್ದ ಈ ಕಾಲದಲ್ಲಿ ವಚನಕಾರರು ತಮ್ಮ ಸರಳ ವಚನಗಳ ಮೂಲಕ ಸಮಾಜದಲ್ಲಿ ಬದಲಾವಣೆಯನ್ನು ತರಲು ಪ್ರಯತ್ನಿಸಿದ್ದರು. ಜಾತಿಯ ಹಂಗಿಲ್ಲದೆ ಎಲ್ಲಾ ವರ್ಗದ ವಚನಕಾರರು ವಚನಗಳ ಮೂಲಕ ತಮ್ಮ ಹೊಸ ಚಿಂತನೆಗಳನ್ನು ಕಟ್ಟಿ ಕೊಡುತ್ತಿದ್ದರು.

ಈ ಮೂಲಕ ಜನರಲ್ಲಿ ಜಾಗೃತಿಯನ್ನು ಮೂಡಿಸುವ ಕೆಲಸವನ್ನು ಇವರು ಮಾಡುತ್ತಿದ್ದರು. ಇವರು ಹಾಕಿಕೊಟ್ಟ ದಾರಿಯಲ್ಲಿ ಸಾಗಿದರೆ ಜೀವನ ಸುಖಮಯ, ಸಮಾಜವೂ ಸುಂದರ. 'ಕಾಯಕವೇ ಕೈಲಾಸ' ಎಂದು ಕಲಿಸಿಕೊಟ್ಟರು.

ಬಸವಣ್ಣನವರು ಯಾವ ಕಾರ್ಯವನ್ನು ಮಾಡಿದರೂ ಭಕ್ತಿಯಿಂದಲೇ ಮಾಡಿರುತ್ತಾರೆ. ಅವರ ವಚನಗಳನ್ನು ನೋಡಿದರೆ ಈ ಮಾತು ಸ್ಪಷ್ಟವಾಗಿ ತೋರುತ್ತಲಿದೆ. ಕೂಡಲಸಂಗನ ಭಕ್ತಿಯಿಲ್ಲದೆ ಅವರ ಯಾವ ವ್ಯವಹಾರವೂ ಇರುವುದಿಲ್ಲ ಎಂದು ಬಸವಣ್ಣನವರ ಭಕ್ತಿಯ ಪ್ರಭಾವಾತಿಶಯವನ್ನು ಅವರ ಕಾಲದ ಶರಣರೂ, ವೀರಶೈವ ಕವಿಗಳೂ ಪರಿಪರಿಯಾಗಿ ಕೊಂಡಾಡಿದ್ದಾರೆ. ಇಂಥ



**ಉಳ್ಳವರು ಶಿವಾಲಯ ಮಾಡುವರು
ನಾನೇನು ಮಾಡಲಿ ಬಡವನಯ್ಯ
ಎನ್ನ ಕಾಲೇ ಕಂಬ, ದೇಹವೇ ದೇಗುಲ
ಶಿರವೇ ಹೊನ್ನ ಕಳಶವಯ್ಯ
ಕೂಡಲಸಂಗಮದೇವಾ ಕೇಳಯ್ಯ
ಸ್ಥಾವರಕ್ಕಳಿವುಂಟು ಜಂಗಮಕ್ಕಳಿವಿಲ್ಲ...**

**ದಯೆವೇ ಧರ್ಮದ ಮೂಲವಯ್ಯ
ದಯೆಯಿಲ್ಲದ ಧರ್ಮ ಯಾವುದಯ್ಯ
ದಯೆ ಬೇಕು ಸಕಲ ಪ್ರಾಣಿಗಳೆಲ್ಲರಲಿ
ದಯೆವೇ ಧರ್ಮದ ಮೂಲವಯ್ಯ
ಕೂಡಲ ಸಂಗಮದೇವನಂತಲ್ಲದೊಲ್ಲನಯ್ಯಾ**

**ನುಡಿದರೆ ಮುತ್ತಿನ ಹಾರದಂತಿರಬೇಕು
ನುಡಿದರೆ ಮಾಣಿಕ್ಯದ ದೀಪ್ತಿಯಂತಿರಬೇಕು
ನುಡಿದರೆ ಲಿಂಗ ಮೆಚ್ಚಿಅಹುದಹುದೆನಬೇಕು
ನುಡಿಯೊಳಗೊಂದಾಗಿ ನಡೆಯದಿರ್ದೊಡೆ
ಹಿಡಿದಿರ್ದ ಲಿಂಗ ಘಟ ಸರ್ಪವಾಗುವುದು
ಕೂಡಲ ಸಂಗಮದೇವಾ**

ಬಸವಣ್ಣನವರ ಭಕ್ತಿ ಪರಾಕಾಷ್ಠೆಯ ಬಗ್ಗೆ, ಅಗಣಿತ ವ್ಯಕ್ತಿತ್ವದ ಬಗ್ಗೆ ಅಕ್ಕ ನಾಗಲಾಂಬಿಕೆ, "ಮರ್ತ್ಯಲೋಕದಲ್ಲಿ ಆ ಸದಾಚಾರದ ಬೆಳವಿಗೆಯ ಮಾಡಲೆಂದು ಬಸವಣ್ಣ ಬಂದು ಭಕ್ತಿಸ್ಥಲವ ಹರಹಿದ. ಗುರು ಲಿಂಗ ಜಂಗಮ ದಾಸೋಹ ಪಾದೋದಕ ಪ್ರಸಾದದ ಹಾದಿಯನೆಲ್ಲರಿಗೆ ತೋರಿದ. ಶಿವಾಚಾರವ ಬೆಳವಿಗೆಯ ಘನವನಹುದಲ್ಲವೆಂದು ಬಿಜ್ಜಳ ತರ್ಕಿಸಲು, ಅನಂತಮುಖದಿಂದ ಒಡಂಬಡಿಸಿ ಅಹುದೆನಿಸಿದ" ಎಂದು ಉಸುರಿದ್ದಾಳೆ. ಭಕ್ತಿಯ ತವನಿಧಿಯೆ, ಮುಕ್ತಿಯ ಮೂರುತಿಯೆ, ಲಿಂಗಜಂಗಮದ ಚೈತನ್ಯವೆ ನಿಮ್ಮನಗಲಿ ಎಂತು ಸೈರಿಸುವೆನು? ಎಂದ ಅಕ್ಕ ನಾಗಮ್ಮ ಬಸವಣ್ಣನನ್ನು ಎಂದೂ ಕ್ಷೀಣಿಸದ ಭಕ್ತಿಯ ತವನಿಧಿ ಎಂದು ಬಣ್ಣಿಸಿದ್ದಾಳೆ. ◆



ಕರ್ನಾಟಕ ಸರ್ಕಾರದಿಂದ ಪ್ರದಾನ ಮಾಡುವ ಪ್ರತಿಷ್ಠಿತ "ಸಂಯಮ ರಾಜ್ಯ ಪ್ರಶಸ್ತಿ"ಯನ್ನು ನಾಡೋಜ ಡಾ. ವೂಡೆ ಪಿ. ಕೃಷ್ಣರಿಗೆ ಗಾಂಧಿ ಭವನದಲ್ಲಿ ನಡೆದ ಸಮಾರಂಭದಲ್ಲಿ ಗೌರವಪೂರ್ವಕವಾಗಿ ಪ್ರದಾನಿಸಲಾಯಿತು. ಈ ಪ್ರಶಸ್ತಿಯನ್ನು ಮಾನ್ಯ ಸಚಿವರಾದ ಹೆಚ್.ಕೆ.ಪಾಟೀಲ್ ಅವರು ಪ್ರದಾನ ಮಾಡಿದರು. ನಾಡೋಜ ಡಾ. ವೂಡೆ ಪಿ. ಕೃಷ್ಣ ಅವರು ತಮ್ಮ ಸಾಹಿತ್ಯ, ಸಂಸ್ಕೃತಿ ಮತ್ತು ಸಮಾಜಮುಖಿ ಚಿಂತನೆಗಳ ಮೂಲಕ ರಾಜ್ಯಕ್ಕೆ ನೀಡಿದ ವಿಶಿಷ್ಟ ಕೊಡುಗೆಯನ್ನು ಪರಿಗಣಿಸಿ ಈ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ.

ಮಲ್ಲೇಶ್ವರದ ಶ್ರೀ ಆಂಜನೇಯ ಮತ್ತು ಶ್ರೀ ರಾಘವೇಂದ್ರ ಸ್ವಾಮಿಗಳ ದೇವಸ್ಥಾನದಲ್ಲಿ 26ನೇ ಶ್ರೀರಾಮನವಮಿ ಸಂಗೀತೋತ್ಸವ - 2026ರ ಅಂಗವಾಗಿ 'ಪ್ರಣವಶ್ರೀ' ಪ್ರಶಸ್ತಿ ಪ್ರದಾನ. ದಾಸ ಸಾಹಿತ್ಯ, ಸಂಗೀತ, ಯೋಗ ಮತ್ತು ನೃತ್ಯ ಕ್ಷೇತ್ರಗಳಲ್ಲಿ ವಿಶಿಷ್ಟ ಸೇವೆ ಸಲ್ಲಿಸಿರುವ ಡಾ. ಗುರುರಾಜ ಪೋಶೆಟ್ಟಿಹಳ್ಳಿ, ವಿ. ಮಾಲತಿ ಶಿಂಗ್ಲಾಚಾರ್ ಮತ್ತು ವಿ. ರಾಮಲಿಂಗಂ ಅವರನ್ನು ಪ್ರಶಸ್ತಿ ನೀಡಿ ಗೌರವಿಸಲಾಯಿತು. ಮುಖ್ಯ ಅತಿಥಿಗಳಾಗಿ ದೇವಸ್ಥಾನದ ಪ್ರಧಾನ ಅರ್ಚಕರಾದ ಕಡ್ಡಿ ಎಸ್. ಜಯತೀರ್ಥಾಚಾರ್ಯರು ಅಭಿನಂದಿಸಿದರು.

ಶ್ರೀಕಾಂತಂ ನಾಗೇಂದ್ರ ಶಾಸ್ತ್ರೀ ಫೌಂಡೇಶನ್ (ರಿ.), ಶಿವ-ಶ್ರೀಕಾಂತ ಸಂಗೀತ ಪ್ರತಿಷ್ಠಾನ(ರಿ.), ಸಪ್ತಗಿರಿ ಭಜನಾ ಮಂಡಳಿ (ರಿ.), ದಾಸ ಸಾಹಿತ್ಯ ಪ್ರಾಜೆಕ್ಟ್ (ಟಿ.ಟಿ.ಡಿ.), ಶ್ರೀ ಗುರುಸಾರ್ವಭೌಮ ದಾಸ ಸಾಹಿತ್ಯ ಪ್ರಾಜೆಕ್ಟ್ ಸೇರಿದಂತೆ ವಿವಿಧ ಸಂಸ್ಥೆಗಳು ಸಂಯುಕ್ತವಾಗಿ ಆಯೋಜಿಸಿದ್ದ ಸಮಾರಂಭದಲ್ಲಿ ಮಹಾರಾಣಿ ಕ್ಲಸ್ಟರ್ ಯೂನಿವರ್ಸಿಟಿ ಡೆಪ್ಯುಟಿ ರಿಜಿಸ್ಟ್ರಾರ್ ಪ್ರೊ ಡಾ. ಶ್ರೀಕಾಂತಂ ನಾಗೇಂದ್ರ ಶಾಸ್ತ್ರೀ, ಪುರಸ್ಕಾರ ಆಯ್ಕೆ ಸಮಿತಿ ಅಧ್ಯಕ್ಷೆ ಜಯಂತಿ ಚಂದ್ರಮೌಳಿ, ಆಯೋಜಕರಾದ ಡಾ. ವಾರುಣಿ ಜಯತೀರ್ಥಚಾರ್ಯ ಕಡ್ಡಿ ಉಪಸ್ಥಿತರಿದ್ದರು.



ಭಾರತದ ಸರ್ವೋಚ್ಚ ನ್ಯಾಯಾಲಯದ ಗೌರವಾನ್ವಿತ ನಿವೃತ್ತ ನ್ಯಾಯಮೂರ್ತಿಗಳಾದ ನಾಡೋಜ ಡಾ. ಶ್ರೀ ಶಿವರಾಜ ವಿ. ಪಾಟೀಲ್‌ರ ಆತ್ಮಕಥನ ಕೃತಿಗೆ ಕರ್ನಾಟಕ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿದ ಸಂದರ್ಭದಲ್ಲಿ, ಡಾ.ಕೆ.ಜಿ. ಲಕ್ಷ್ಮೀನಾರಾಯಣಪ್ಪನವರು ಹಾಗೂ ಅವರ ಆತ್ಮೀಯ ಸ್ನೇಹಿತರು, ಜೊತೆಗೆ ಕರ್ನಾಟಕ ರಾಜ್ಯ ಮಹಿಳಾ ನೇಕಾರ ಸಮುದಾಯಗಳ ಒಕ್ಕೂಟದ ಸದಸ್ಯರು ಮತ್ತು ಸಮಗ್ರ ಕರ್ನಾಟಕ ಪತ್ರಕರ್ತರ ಸಂಘದ ಪದಾಧಿಕಾರಿಗಳು, ನ್ಯಾಯಮೂರ್ತಿಗಳನ್ನು ಗೌರವಪೂರ್ವಕವಾಗಿ ಅಭಿನಂದಿಸಿ ಸನ್ಮಾನಿಸಿದರು.





ಹಂಸ ಜ್ಯೋತಿ ಟ್ರಸ್ಟ್ (ರಿ), ಬೆಂಗಳೂರು ಸಂಸ್ಥೆಯ ಸುವರ್ಣ ಸಂಭ್ರಮಾಚರಣೆಯ ಅಂಗವಾಗಿ 'ಹಂಸ ಜ್ಯೋತಿ ಸುವರ್ಣ ಸಂಭ್ರಮಾಚರಣೆ' ಹಾಗೂ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಹಲವು ಸಾಧಕೋತ್ತಮರಿಗೆ 'ಹಂಸ ಸಮ್ಮಾನ್ - 2026' ಪ್ರಶಸ್ತಿ ಪ್ರದಾನವನ್ನು ಮಾಜಿ ಲೋಕಾಯುಕ್ತ ನ್ಯಾ. ಸಂತೋಷ ಹೆಗ್ಡೆ ಉದ್ಘಾಟಿಸಿದರು. ಹಿರಿಯ ರಂಗಸಂಘಟಕ ಶ್ರೀನಿವಾಸ ಜಿ. ಕಪ್ಪಣ್ಣ ಅಧ್ಯಕ್ಷತೆ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಉಪಲೋಕಾಯುಕ್ತ ನ್ಯಾ. ಬಿ. ವೀರಪ್ಪ, ಡಾ. ಸಿ. ರಾಮಚಂದ್ರ, ಡಾ. ಬಿ.ಆರ್. ಹಿರೇಮಠ, ಮೊಳಕಾಲ್ಮೂರು ಶ್ರೀನಿವಾಸಮೂರ್ತಿ, ಎಂ. ಮುರಳಿಧರ ಮತ್ತು ವಿಜಯ ಮುರಳಿಧರ ಮೊದಲಾದವರು ಉಪಸ್ಥಿತರಿದ್ದರು.

## ನಂದಿ ವಾಹಿನಿ ಯೂಟ್ಯೂಬ್ ಚಾನೆಲ್ ಸ್ಟುಡಿಯೋಗೆ ಆಗಮಿಸಿದ ಗಣ್ಯಮಾನ್ಯರು










## ಅಮರ ಬಾಪು ಚಿಂತನ ಗಣ್ಯರಿಗೆ ಸಮರ್ಪಣೆ

























# ನಂದಿ ವಾಹಿನಿ ಯೂಟ್ಯೂಬ್ ಚಾನಲ್

ಸದಭಿರುಚಿಯ ಮತ್ತೊಂದು ಹೆಸರು!

Nandi Vahini Youtube Channel

Subscribe

Scan QR Code









1 ನೇ ವರ್ಷದ ಸಂಭ್ರಮ




5,20,000 Views

6500 Subscribers



ನಂದಿ ವಾಹಿನಿ ಮನರಂಜನೆಯ ಮನೆ — NANDI VAHINI PRODUCTION HOUSE

nandivahini1@gmail.com
www.nandivahini.com
www.facebook.com/Nandi Vahini
www.instagram.com/nandivahini
X.com/@NandiVahini

No.88, Jeerige Building,11th Cross, Sampige Road, Malleshwaram, Bangalore-560003, Mob: 94480 42653 | 90190 87050

# ನಂದಿ ವಾಹಿನಿಯಲ್ಲಿ ಕಾರ್ಯಕ್ರಮ ಪ್ರಸ್ತುತ ಪಡಿಸಿದ ಖ್ಯಾತ ಕಲಾವಿದರು










# ಮಾನವಕುಲಕ್ಕೆ ಮಾರ್ಗದರ್ಶಕ ಮಹಾವೀರರ ಧರ್ಮಸಂದೇಶ

ಮಹಾವೀರ ಜಯಂತಿ
ನಿಮಿತ್ತ ಲೇಖನ
(ಮಾರ್ಚ್ 30)

– ಡಾ. ಗುರುರಾಜ ಪೋಶೆಟ್ಟಿಹಳ್ಳಿ

ಭಾರತೀಯ ಧಾರ್ಮಿಕ-ತತ್ತ್ವ ಚಿಂತನೆಯ ಇತಿಹಾಸದಲ್ಲಿ ಅಹಿಂಸೆ, ಸತ್ಯ ಮತ್ತು ತಪಸ್ಸಿನ ಪರಮೋನ್ನತ ಆದರ್ಶಗಳನ್ನು ಪ್ರತಿಪಾದಿಸಿದ ಮಹಾನ್ ವ್ಯಕ್ತಿತ್ವಗಳಲ್ಲಿ ಭಗವಾನ್ ಮಹಾವೀರ ಅವರ ಸ್ಥಾನ ವಿಶಿಷ್ಟವಾಗಿದೆ. ಜೈನ ಧರ್ಮದ 24ನೇ ತೀರ್ಥಂಕರರಾದ ಮಹಾವೀರರು ಮಾನವಕುಲಕ್ಕೆ ಶಾಂತಿ, ಸಹಿಷ್ಣುತೆ ಮತ್ತು ಆತ್ಮಶುದ್ಧಿಯ ಮಾರ್ಗವನ್ನು ತೋರಿದ ಮಹಾನ್ ದಾರ್ಶನಿಕರು.

**ರಾಜಕುಮಾರನಿಂದ ತಪಸ್ವಿವರೆಗೆ**

ಕ್ರಿ.ಪೂ. 599ರಲ್ಲಿ ಕುಂಡಲಪುರದಲ್ಲಿ ವರ್ಧಮಾನ ಎಂಬ ಹೆಸರಿನಲ್ಲಿ ಜನಿಸಿದ ಮಹಾವೀರರು ರಾಜಕುಟುಂಬದಲ್ಲಿ ಹುಟ್ಟಿದರೂ ಲೋಕಸೌಖ್ಯಗಳನ್ನು ತ್ಯಜಿಸಿ ತಪಸ್ಸಿನ ಮಾರ್ಗವನ್ನು ಆರಿಸಿಕೊಂಡರು. 30ನೇ ವಯಸ್ಸಿನಲ್ಲಿ ಮಹಾವೀರರು ಸಕಲ ಐಹಿಕ ಬಂಧನಗಳನ್ನು ತ್ಯಜಿಸಿ ತಪಸ್ಸಿನ ಮಾರ್ಗವನ್ನು ಹಿಡಿದರು. 12 ವರ್ಷಗಳ ದೀರ್ಘ ತಪಸ್ಸು, ಧ್ಯಾನ ಮತ್ತು ಕಠಿಣ ಸಾಧನೆಯ ಮೂಲಕ ಅವರು ಕೇವಲ ಜ್ಞಾನವನ್ನು (ಸಂಪೂರ್ಣ ಜ್ಞಾನ) ಪಡೆದರು. ಈ ಸ್ಥಿತಿಯಲ್ಲಿ ಅವರು "ಜಿನ" (ಜಯಿಸಿದವರು) ಎಂಬ ಬಿರುದಿಗೆ ಪಾತ್ರರಾದರು.





**ತತ್ತ್ವಚಿಂತನೆ ಮತ್ತು ಉಪದೇಶಗಳು**

ಮಹಾವೀರರ ಉಪದೇಶಗಳ ಸಾರ ಅಹಿಂಸೆ ಮತ್ತು ಆತ್ಮಶುದ್ಧಿಯಾಗಿದೆ. ಅವರ ತತ್ವಗಳು ಇಂದಿಗೂ ಜಗತ್ತಿಗೆ ದಾರಿದೀಪವಾಗಿವೆ:

**ಅನೇಕಾಂತವಾದ ವೈಚಾರಿಕ ವಿಶಾಲತೆ**

ಮಹಾವೀರರು ಪ್ರತಿಪಾದಿಸಿದ ಅನೇಕಾಂತವಾದ ತತ್ವವು ಸತ್ಯವು ಒಂದೇ ದೃಷ್ಟಿಕೋನದಿಂದ ಸಂಪೂರ್ಣವಾಗಿ ಗ್ರಹಿಸಲು ಸಾಧ್ಯವಿಲ್ಲವೆಂದು ಹೇಳುತ್ತದೆ. ಇದು ಸಹಿಷ್ಣುತೆ ಮತ್ತು ಪರಸ್ಪರ ಗೌರವದ ಮೌಲ್ಯಗಳನ್ನು ಬೋಧಿಸುತ್ತದೆ. ಇಂದಿನ ಬಹುಸಾಂಸ್ಕೃತಿಕ ಸಮಾಜದಲ್ಲಿ ಈ ತತ್ವ ಅತ್ಯಂತ ಪ್ರಸ್ತುತವಾಗಿದೆ.

ಸಾಮಾಜಿಕ ಮತ್ತು ನೈತಿಕ ಪ್ರಭಾವ: ಮಹಾವೀರರ ಉಪದೇಶಗಳು ಕೇವಲ ಧಾರ್ಮಿಕ ಕ್ಷೇತ್ರಕ್ಕೆ ಮಾತ್ರ ಸೀಮಿತವಾಗಿರದೆ, ಸಾಮಾಜಿಕ ಮತ್ತು ನೈತಿಕ ಕ್ಷೇತ್ರಗಳಲ್ಲಿಯೂ ಮಹತ್ವದ ಪ್ರಭಾವ ಬೀರಿವೆ. ಅವರ ಅಹಿಂಸಾ ತತ್ವವು ಮುಂದಿನ ಕಾಲದಲ್ಲಿ ಮಹಾತ್ಮ ಗಾಂಧಿ ಅವರಂತಹ ಮಹಾನ್ ನಾಯಕರು ಪಾಲಿಸಿದ ಮಾರ್ಗವಾಗಿತ್ತು.

ಅಹಿಂಸಾ ಪರಮೋ ಧರ್ಮಃ– ಯಾವುದೇ ಜೀವಿಗೆ ಹಾನಿ ಮಾಡಬಾರದು.

ಸತ್ಯ – ನಿಷ್ಠೆಯಿಂದ ಸತ್ಯವನ್ನು ಪಾಲಿಸುವುದು.

ಅಸ್ತೇಯ – ಪರರ ಸೊತ್ತನ್ನು ಅಪಹರಿಸಬಾರದು.

ಬ್ರಹ್ಮಚರ್ಯ – ಇಂದ್ರಿಯ ನಿಯಂತ್ರಣ.

ಅಪರಿಗ್ರಹ – ಆಸೆ-ಆಕಾಂಕ್ಷೆಗಳ ನಿಯಂತ್ರಣ.

ಈ ಪಂಚಮಹಾವ್ರತಗಳು ವ್ಯಕ್ತಿಯನ್ನು ಆತ್ಮಶುದ್ಧಿಯತ್ತ ಕೊಂಡೊಯ್ಯುವ ಮಹತ್ವದ ನಿಯಮಗಳಾಗಿವೆ.

**ಮಹಾವೀರ ಜಯಂತಿ ಆಚರಣೆ**

ಈ ದಿನ ಜೈನ ಸಮುದಾಯವು ಪೂಜೆ, ಪ್ರಾರ್ಥನೆ, ಧರ್ಮೋಪದೇಶಗಳ ಮೂಲಕ ಮಹಾವೀರರನ್ನು ಸ್ಮರಿಸುತ್ತದೆ. ದಾನ, ಧರ್ಮ ಮತ್ತು ಸೇವಾ ಚಟುವಟಿಕೆಗಳಿಗೆ ವಿಶೇಷ ಮಹತ್ವ ನೀಡಲಾಗುತ್ತದೆ.

**ಇಂದಿನ ಜಗತ್ತಿಗೆ ಸಂದೇಶ**

ಹಿಂಸೆ ಮತ್ತು ಅಸಹಿಷ್ಣುತೆ ಹೆಚ್ಚುತ್ತಿರುವ ಇಂದಿನ ಕಾಲಘಟ್ಟದಲ್ಲಿ ಮಹಾವೀರರ ತತ್ವಗಳು ಶಾಂತಿಯ ದಾರಿದೀಪವಾಗಿವೆ. ಅಹಿಂಸೆಯ ಮಾರ್ಗವೇ ಮಾನವಕುಲದ ಭವಿಷ್ಯವನ್ನು ರಕ್ಷಿಸಬಲ್ಲದು.

ಭಗವಾನ್ ಮಹಾವೀರರ ಜೀವನ ಮತ್ತು ತತ್ವಗಳು ಶಾಶ್ವತ ಸತ್ಯಗಳ ಪ್ರತಿರೂಪವಾಗಿದೆ. ಮಹಾವೀರ ಜಯಂತಿ ನಮಗೆ ಅವರ ಮೌಲ್ಯಗಳನ್ನು ಜೀವನದಲ್ಲಿ ಅಳವಡಿಸಿ ಕೊಳ್ಳುವ ಪ್ರೇರಣೆಯಾಗಿದೆ. ◆

# ಭಾರತೀಯ ಮಹಿಳೆಯರಿಗೆ

**ಸರೋಜಿನಿ ನಾಯ್ಡು ಅವರ ಜೀವನವು ದೇಶಭಕ್ತಿ, ಕಲೆ ಮತ್ತು ಸೇವೆಯ ಮಿಶ್ರಣವಾಗಿದೆ. ಇವರ ಕಾವ್ಯಗಳು ಇಂದಿಗೂ ಓದುಗರ ಹೃದಯವನ್ನು ಮುಟ್ಟುತ್ತವೆ. ಸ್ವಾತಂತ್ರ್ಯ ಹೋರಾಟದಲ್ಲಿ ಅವರ ಕೊಡುಗೆ ಅನನ್ಯವಾಗಿದ್ದು, ಭಾರತೀಯ ಮಹಿಳೆಯರಿಗೆ ಪ್ರೇರಣೆಯಾಗಿದ್ದಾರೆ.**

**– ಸುಮ ಚಂದ್ರಶೇಖರ್**






**ಸ**ರೋಜಿನಿ ನಾಯ್ಡು "ಭಾರತದ ಕೋಗಿಲೆ" ಎಂದು ಪ್ರಸಿದ್ಧಿ. ಕವಿಯತ್ರಿಯಾಗಿ ಸ್ವಾತಂತ್ರ್ಯ ಹೋರಾಟಗಾರ್ತಿಯಾಗಿ ಮತ್ತು ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಮೊದಲ ಮಹಿಳಾ ಅಧ್ಯಕ್ಷೆಯಾಗಿ ಹಲವು ಪ್ರಮುಖ ಜವಾಬ್ದಾರಿಗಳನ್ನು ನಿರ್ವಹಿಸಿ ತಮ್ಮದೇ ಆದ ಹೆಗ್ಗುರುತನ್ನು ಉಳಿಸಿಕೊಂಡು ಬಂದವರು.

ಫೆಬ್ರವರಿ 13, 1879ರಂದು ಹೈದರಾಬಾದ್‌ನಲ್ಲಿ ಸರೋಜಿನಿ ಚಟ್ಟೋಪಾಧ್ಯಾಯ ಎಂಬ ಹೆಸರಿನಿಂದ ಜನಿಸಿದ ಅವರು ಬಾಲ ಪ್ರತಿಭೆ. ಆಕೆಯ ತಂದೆ ಅಘೋರ್ ನಾಥ್ ಚಟ್ಟೋಪಾಧ್ಯಾಯ ಹೈದರಾಬಾದ್‌ನಲ್ಲಿ ನಿಜಾಮ್ ಕಾಲೇಜನ್ನು ಸ್ಥಾಪಿಸಿದ ವಿಜ್ಞಾನಿ. ಆಕೆಯ ತಾಯಿ ಬರಡಾ ಸುಂದರಿ ದೇವಿ ಪ್ರಸಿದ್ಧ ಬಂಗಾಳಿ ಕವಿಗಳಲ್ಲಿ ಒಬ್ಬರು. ಎಂಟು ಮಂದಿ ಒಡಹುಟ್ಟಿದವರಲ್ಲಿ ಸರೋಜಿನಿ ಹಿರಿಯರು.

ಇವರು ಕೇವಲ 12 ವರ್ಷದವಳಿದ್ದಾಗ ಮದ್ರಾಸ್ ವಿಶ್ವವಿದ್ಯಾಲಯದಲ್ಲಿ ಮೆಟ್ರಿಕ್ಯುಲೇಷನ್ ಪರೀಕ್ಷೆಯಲ್ಲಿ ಅಗ್ರಸ್ಥಾನದಲ್ಲಿದ್ದಳು. 16ನೇ ವಯಸ್ಸಿನಲ್ಲಿ ಹೈದರಾಬಾದ್‌ನ ನಿಜಾಮರಿಂದ ವಿದ್ಯಾರ್ಥಿವೇತನ ಪಡೆದರು. ಲಂಡನ್‌ನ ಕಿಂಗ್ಸ್ ಕಾಲೇಜಿನಲ್ಲಿ ಅಧ್ಯಯನ ಮಾಡಲು ಲಂಡನ್‌ಗೆ ಹೋದರು. ನಂತರ ಕೇಂಬ್ರಿಡ್ಜ್‌ನ ಗಿರ್ಟನ್ ಕಾಲೇಜಿನಲ್ಲಿ ಅಧ್ಯಯನ ಮಾಡಿದರು.

ಅದ್ಭುತ ಶೈಕ್ಷಣಿಕ ದಾಖಲೆಯಿಂದಾಗಿ, ಸರೋಜಿನಿ ಅವರ ತಂದೆ ಅವರು ವಿಜ್ಞಾನಿಯಾಗಬೇಕೆಂದು ಬಯಸಿದ್ದರು. ಆದರೆ ಅವಳು ಕಾವ್ಯದ ಬಗ್ಗೆ ಸಹಜವಾದ ಪ್ರೀತಿಯನ್ನು ಹೊಂದಿದ್ದಳು. ಅವಳು ತನ್ನ ಗಣಿತದ ನೋಟ್‌ಬುಕ್‌ನಲ್ಲಿ ತನ್ನ ಮೊದಲ ಕವಿತೆಯನ್ನು ಬರೆದಳು. ಆಕೆಯ ಮೊದಲ ಸಾಹಿತ್ಯ ಕೃತಿ 'ಮಹೇರ್ ಮುನೀರ್' ಹೈದರಾಬಾದ್ ನಿಜಾಮನನ್ನು ಮೆಚ್ಚಿಸಿತು. ಅವಳು 1,300–ಸಾಲುಗಳ ದೀರ್ಘ ಕವಿತೆ ದಿ ಲೇಡಿ ಆಫ್ ದಿ ಲೇಕ್ ಅನ್ನು ಬರೆದಾಗ ಅವಳ ನಿಜವಾದ ಉತ್ಸಾಹವು ಕಾವ್ಯದಲ್ಲಿದೆ ಎಂದು ಅವಳ ತಂದೆ ಅರಿತುಕೊಂಡರು ಮತ್ತು ಅದನ್ನು ಹೆಚ್ಚು ಗಂಭೀರವಾಗಿ ಪ್ರೋತ್ಸಾಹಿಸಲು ಪ್ರಾರಂಭಿಸಿದರು.

ಸರೋಜಿನಿ ಅವರು ಲಂಡನ್‌ನಲ್ಲಿದ್ದಾಗ ವೃತ್ತಿಯಲ್ಲಿ ವೈದ್ಯರಾದ ಡಾ.ಗೋವಿಂದ ರಾಜುಲು ನಾಯ್ಡು ಅವರನ್ನು ಭೇಟಿಯಾದರು. ವಿದ್ಯಾಭ್ಯಾಸ ಮುಗಿಸಿ ಅವರನ್ನು ಮದುವೆಯಾದರು. ಆ ಸಮಯದಲ್ಲಿ ಅಂತರ್ಜಾತಿ ವಿವಾಹಗಳು ನಿಷಿದ್ಧವಾಗಿತ್ತು ಆದರೆ ಆಕೆಯ ತಂದೆ ಪ್ರಗತಿಪರ ಚಿಂತಕರಾಗಿದ್ದರಿಂದ ಆಕೆಗೆ ಅವಕಾಶ ನೀಡಿದರು.

**ರಾಜಕೀಯ ಕ್ರಿಯಾಶೀಲತೆ**

1905ರಲ್ಲಿ ಬಂಗಾಳದ ವಿಭಜನೆಯ ನಂತರ ಸರೋಜಿನಿ ಭಾರತೀಯ ಸ್ವಾತಂತ್ರ್ಯ

**"ಕಾವ್ಯದ ಮೂಲಕ ಮನಸ್ಸನ್ನು ಗೆದ್ದವರು, ಹೋರಾಟದ ಮೂಲಕ ದೇಶವನ್ನು ಗೆದ್ದವರು – ಸರೋಜಿನಿ ನಾಯ್ಡು."**



# ಪ್ರೇರಣೆ ನಾಯ್ಡು

ಹೋರಾಟಕ್ಕೆ ಸೆಳೆಯಲ್ಪಟ್ಟರು. ಅವರು ಗೋಪಾಲ ಕೃಷ್ಣ ಗೋಖಲೆ ಅವರನ್ನು ಭೇಟಿಯಾದರು. ಜನಸಾಮಾನ್ಯರಲ್ಲಿ ಸ್ವಾತಂತ್ರ್ಯದ ಉತ್ಸಾಹವನ್ನು ಉತ್ತೇಜಿಸಲು ಆಕೆಯ ಕಾವ್ಯವನ್ನು ಬಳಸುವಂತೆ ಕೇಳಿಕೊಂಡರು.

ನಾಯ್ಡು ಅವರು ಮಹಾತ್ಮ ಗಾಂಧಿ ಅವರನ್ನು ಮೊದಲು ಭೇಟಿಯಾದದ್ದು ಲಂಡನ್‌ನಲ್ಲಿ. ಈ ಘಟನೆಯು ಅವರ ಜೀವನದ ಸಂಪೂರ್ಣ ಹಾದಿಯನ್ನು ಬದಲಾಯಿಸಿತು. ಇದು ಅವಳನ್ನು ವಿದ್ವಾಂಸರು ಮತ್ತು ಕವಿಗಳ ಆರಾಮದಾಯಕ ಕೋಣೆಗಳಿಂದ ದೂರವಿಟ್ಟು ಹೋರಾಟಗಾರರ ಜೊತೆ ನಡೆಸಿತು. ಕಾಲಾನಂತರದಲ್ಲಿ ಇಬ್ಬರೂ ಉತ್ತಮ ಗೆಳೆಯರಾದರು. ಸೌಹಾರ್ದತೆಯನ್ನು ಹಂಚಿಕೊಂಡರು. ಆಗಸ್ಟ್ 8, 1932ರಂದು ಗಾಂಧಿಯವರು ನಾಯ್ಡುಗೆ ಬರೆದ ಪತ್ರದಲ್ಲಿ ನಾಯ್ಡು ಅವರನ್ನು 'ಬುಲ್ಬುಲ್' ಎಂದು ಸಂಬೋಧಿಸಿದ್ದರು ಮತ್ತು 'ಲಿಟಲ್ ಮ್ಯಾನ್' ಎಂದು ಸಹಿ ಹಾಕಿದರು. ಇನ್ನೊಂದು ಪತ್ರದಲ್ಲಿ ಒಂದು ಕಡೆ ನಾಯ್ಡು ಅವರು ಗಾಂಧೀಜಿಯನ್ನು "ಮಿಕ್ಕಿ ಮೌಸ್", "ಲಿಟಲ್ ಮ್ಯಾನ್" ಎಂದು ಉಲ್ಲೇಖಿಸಿದ್ದರು.


ಗೋಖಲೆ

ಗಾಂಧೀಜಿ ಅದನ್ನು ವಿನೋದವಾಗಿ ತೆಗೆದುಕೊಂಡಿದ್ದರು. ವಾಸ್ತವವಾಗಿ, ಮಿಕಿ ಮೌಸ್ ಎಂಬುದು ಇಂಗ್ಲಿಷ್ ಮಾಧ್ಯಮಗಳು ಗಾಂಧಿಯವರನ್ನು ವಿನೋದವಾಗಿ ಕರೆಯುತ್ತಿದ್ದ ಹೆಸರಾಗಿತ್ತು.

**ಸ್ವಾತಂತ್ರ್ಯ ಹೋರಾಟದಲ್ಲಿ ಪಾತ್ರ**

ನಾಯ್ಡು ಅವರು ನಾಗರಿಕ ಅಸಹಕಾರ ಚಳುವಳಿ ಮತ್ತು ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಪ್ರಮುಖ ಪಾತ್ರವನ್ನು ವಹಿಸಿದರು. ಆಕೆಯನ್ನು ಮಹಾತ್ಮಾ ಗಾಂಧಿ ಮತ್ತು ಇತರರೊಂದಿಗೆ ಜೈಲಿಗೆ ಹಾಕಲಾಯಿತು. 1925ರಲ್ಲಿ, ಅವರು ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ ಎರಡನೇ ಮಹಿಳಾ ಅಧ್ಯಕ್ಷರಾದರು. 1930ರಲ್ಲಿ ಮಹಾತ್ಮಾ ಗಾಂಧಿ ಜೈಲಿನಲ್ಲಿದ್ದಾಗ ಅವರು ಅಸಹಕಾರದ ಮುಂಚೂಣಿಯಲ್ಲಿದ್ದರು. 1931ರಲ್ಲಿ ಅವರು





ಮಹಾತ್ಮ ಗಾಂಧಿ ಮತ್ತು ಪಂಡಿತ್ ಮಾಳವೀಯರೊಂದಿಗೆ ದುಂಡು ಮೇಜಿನ ಶೃಂಗಸಭೆಯಲ್ಲಿ ಭಾಗವಹಿಸಿದರು. ಭಾರತೀಯ ಸಂವಿಧಾನದ ಕರಡು ರಚನೆಗೂ ಕೊಡುಗೆ ನೀಡಿದ್ದಾರೆ.

**ಅಸಾಧಾರಣ ವಾಗ್ಮಿ**


ನಾಯ್ಡು ಅವರು ಪ್ರೇಕ್ಷಕರನ್ನು ಸಮ್ಮೋಹನಗೊಳಿಸುವ ವಾಗ್ಮಿಯಾಗಿದ್ದರು. ಮಾತನಾಡುವುದು ಅವರಿಗೆ ಮೀನು ಈಜುವಷ್ಟು ಸುಲಭವಾಗಿತ್ತು. ಮಹಿಳೆಯರನ್ನು ಸ್ವಾತಂತ್ರ್ಯ ಚಳವಳಿಯತ್ತ ಸೆಳೆಯುವಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ಭಾರತದ ಮಹಿಳೆಯರನ್ನು ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸುವಂತೆ ಪ್ರೇರೇಪಿಸಿ ಅಡುಗೆ ಮನೆಯಿಂದ ಹೊರತಂದ ಕೀರ್ತಿ ಅವರಿಗೆ ಸಲ್ಲುತ್ತದೆ. ರಾಜ್ಯದಿಂದ ರಾಜ್ಯಕ್ಕೆ, ನಗರದಿಂದ ನಗರಕ್ಕೆ ಪ್ರಯಾಣಿಸಿ ಮಹಿಳೆಯರ ಹಕ್ಕುಗಳನ್ನು ಕೇಳಿದರು. ಮಹಿಳೆಯರಲ್ಲಿ ಸ್ವಾಭಿಮಾನವನ್ನು ಮರುಸ್ಥಾಪಿಸಿದರು. ಅನ್ನಿಬೆಸೆಂಟ್ ಮತ್ತು ಇತರರೊಂದಿಗೆ 1917ರಲ್ಲಿ ಮಹಿಳಾ ಭಾರತೀಯ ಸಂಘವನ್ನು ರೂಪಿಸಿದರು. ಸಂಘವು ಸ್ತ್ರೀಯರಿಗೆ ಮತದಾನ ಮತ್ತು ಪ್ರತಿನಿಧಿಸುವ ಹಕ್ಕು ಸೇರಿದಂತೆ ಸಮಾನ ಹಕ್ಕುಗಳನ್ನು ಕೋರಿತು. ಕಾಂಗ್ರೆಸ್ ಮತ್ತು ಸ್ವಾತಂತ್ರ್ಯ ಹೋರಾಟದಲ್ಲಿ ಹೆಚ್ಚಿನ ಮಹಿಳೆಯರನ್ನು ಸೇರಿಸುವ ಅಗತ್ಯವನ್ನು ಅವರು ಮಂಡಿಸಿದರು.

ಭಾರತ ಸ್ವಾತಂತ್ರ್ಯ ಪಡೆದ ನಂತರ, ಸರೋಜಿನಿ ಉತ್ತರ ಪ್ರದೇಶದ ಗವರ್ನರ್ ಆದ ಮೊದಲ ಮಹಿಳೆ. ನಾಯ್ಡು ಅವರು ಕಚೇರಿಯಲ್ಲಿದ್ದಾಗ ಹೃದಯಾಘಾತಕ್ಕೆ ಒಳಗಾದರು ಮತ್ತು ಮಾರ್ಚ್ 2, 1949 ರಂದು ಲಕ್ನೋದಲ್ಲಿ ನಿಧನರಾದರು. ◆

# ಗಾಂಧಿ ಎಂಬ ಆಶಾಕಿರಣ

– ಡಿ.ಎಸ್. ನಾಗಭೂಷಣ



ಗೆಳೆಯರೊಂದಿಗೆ ದೆಹಲಿಗೆ ಹೋಗಿದ್ದೆ, ಅಲ್ಲಿದ್ದ ನಾಲ್ಕು ದಿನಗಳಲ್ಲಿ, ಆ ನಗರದಲ್ಲಿರುವ ಹೆಚ್ಚು ಕಡಿಮೆ ಎಲ್ಲ ಸ್ಮಾರಕಗಳಿಗೂ ಹೋಗಿ ಬಂದೆ. ಆ ಸಂದರ್ಭದಲ್ಲಿ ನನಗಾದ ಆಶ್ಚರ್ಯವೆಂದರೆ, ಈ ಸ್ಮಾರಕಗಳಿಗೆ ಭೇಟಿ ಕೊಡುವ ಸಂದರ್ಶಕರ ಅತ್ಯಂತ ಹೆಚ್ಚು ಜನಸಂದಣಿ ಕಂಡದ್ದು ಗಾಂಧಿ ಸಮಾಧಿ ಇರುವ ರಾಜ್ ಘಾಟ್‌ನಲ್ಲಿ, ಇಳಿಸಂಜೆಯ ಹೊತ್ತಿನಲ್ಲೂ ಅಲ್ಲಿಗೆ ಭೇಟಿ ನೀಡುವವರ ಸಂಖ್ಯೆ ಗಣನೀಯವಾಗಿತ್ತು.

ಸಾರ್ವಜನಿಕ ಜೀವನದಲ್ಲಿ ಗಾಂಧಿ ಕಾಲ ಮುಗಿದಿದೆ ಎಂಬ ನಂಬಿಕೆ ಸರ್ವವ್ಯಾಪಿ ಯಾಗುತ್ತಿರುವ ಮತ್ತು ಇದಕ್ಕೆ ತಕ್ಕಂತೆ ರಾಷ್ಟ್ರ ರಾಜಕಾರಣವು ನಿರ್ಣಾಯಕ ತಿರುವೊಂದನ್ನು ತೆಗೆದುಕೊಳ್ಳುತ್ತಿರುವಂತೆ ತೋರುತ್ತಿರುವ ಈ ದಿನಗಳಲ್ಲಿ, ಗಾಂಧಿಗೆ ಗೌರವ ತೋರುವ ಜನರ ಈ ವಿಶೇಷ ಆಸಕ್ತಿ ಕುತೂಹಲಕರ ಸಂಗತಿಯೇ ಆಗಿದೆ. ಇಲ್ಲಿ ನಾನು ಕಂಡ ಇನ್ನೊಂದು ವಿಶೇಷ ಸಂಗತಿಯೆಂದರೆ, ರಾಜ್ ಘಾಟ್‌ಗೆ ಭೇಟಿ ನೀಡುವ ಈ ಜನ ಸಮೂಹದಲ್ಲಿ, ಇತರ ಸ್ಮಾರಕಗಳ ಬಳಿ ಹೆಚ್ಚಿನ ಸಂಖ್ಯೆಯಲ್ಲಿ ಕಂಡುಬರುವ ಆಧುನಿಕ ದಿರಿಸು ಧರಿಸಿದ ಮೇಲ್ಮಧ್ಯಮ ಮತ್ತು ಪ್ರತಿಷ್ಠಿತ ವರ್ಗಕ್ಕೆ ಸೇರಿದವರಂತೆ ತೋರುವ ಜನ ಕಡಿಮೆ. ಭಾರತದ ಸಾಮಾನ್ಯ ಜನ, ಬಡಬಗ್ಗರು, ಆದಿವಾಸಿಗಳು, ಮಹಿಳೆಯರು ಮತ್ತು ವಿದೇಶಿ ಪ್ರವಾಸಿಗರ ಸಂಖ್ಯೆ ಹೆಚ್ಚು.

ಇದರಿಂದ ಗೊತ್ತಾಗುವುದೇನೆಂದರೆ, ನಮ್ಮ ರಾಜಕಾರಣ ಗಾಂಧಿಯ ಚಿತ್ರವನ್ನು ಎಷ್ಟೇ ವಿರೂಪಗೊಳಿಸಿದರೂ, ನಮ್ಮ ಜನಮಾನಸದಲ್ಲಿ ನಾವು ಸರಳವಾಗಿ ಮತ್ತು ಸುಲಭವಾಗಿ ವಿವರಿಸಲಾಗದ ಯಾವುದೋ ಒಂದು ಆಳದ ಕಾರಣದಿಂದಾಗಿ ಗಾಂಧಿ ಇನ್ನೂ ಜೀವಂತವಿದ್ದಾರೆ.

ಸಾಮಾನ್ಯ ಜನರಲ್ಲಿ ಗೌರವ, ಶ್ರದ್ಧೆ ಅಥವಾ ಪ್ರೀತಿ, ಆಸಕ್ತಿಗಳನ್ನು ಕಳೆದು ಕೊಂಡಿಲ್ಲ. ಇಂದಿನ ಕಲುಷಿತ ರಾಜಕಾರಣ ಮತ್ತು ಸಾರ್ವಜನಿಕ ಜೀವನವನ್ನು ಗಾಂಧಿ ಚಿಂತನೆಗಳ ಮೂಲಕ ತಕ್ಕಮಟ್ಟಿಗಾದರೂ ಸಹನೀಯಗೊಳಿಸಿ ತಹಬಂದಿಗೆ ತರಬಹುದೆಂದು ನಂಬಿದವರಿಗೆ ಇಲ್ಲಿದೆ ಒಂದು ಆಶಾಕಿರಣ ಎಂದು, ಗಾಂಧಿ ಸಮಾಧಿಗೆ ಭೇಟಿಕೊಟ್ಟು ಹೊರಬರುತ್ತಿದ್ದ ಜನಸಮೂಹದ ಮುಖಚರ್ಯೆಗಳನ್ನು ಗಮನಿಸಿದಾಗ ನನಗನ್ನಿಸಿತು.

ಆದರೆ ಅದೇ ಸಮಯದಲ್ಲಿ ಇಂದಿನ ಸವಾಲುಗಳನ್ನು ಎದುರಿಸಲು ಇಂದು ನಮಗೆ ಬೇಕಾದ ಗಾಂಧಿಯನ್ನು ಪುನರ್ ಅನ್ವೇಷಿಸಿಕೊಳ್ಳಲು ಅಧ್ಯಯನಶೀಲತೆ, ವಿವೇಕ, ಜಾಣ್ಮೆಬೇಕು. ಜೊತೆಗೇ ಗಾಂಧಿ ಯುಗದ ಜೀವನ ದೃಷ್ಟಿ ಮತ್ತು ಮೌಲ್ಯಗಳು, ಅರ್ಪಣಾ ಮನೋಭಾವ, ಸಂಘಟನಾ ಶೀಲತೆ, ಶ್ರದ್ಧೆ ಮತ್ತು ಶಿಸ್ತುಗಳ ಅಗತ್ಯವೂ ಇದೆ. ◆

**(ಕೃಪೆ: ಜನಪದ ವಿಚಾರ)**

## ಶ್ರದ್ಧೆ

ಶ್ರದ್ಧೆಯು ಮನುಷ್ಯ ಜೀವನದ ಮಹತ್ತರ ಚಾಲಕಶಕ್ತಿ, ಅದರ ಅಸ್ತಿತ್ವವಿಲ್ಲದೆ ನೀತಿ ಬೆಳೆಯಲಾರದು. ಮನುಷ್ಯ ಬದುಕಲಾರ. ಒಂದಲ್ಲ ಒಂದು ವಿಷಯದಲ್ಲಿ ಶ್ರದ್ಧೆ ಇರಲೇಬೇಕು. ಅದು ಮನುಷ್ಯನಿಗೆ ಆಶ್ರಯ ಸ್ಥಾನವೂ, ಪ್ರೇರಕ ಶಕ್ತಿಯೂ ಆಗಿ ಜೀವನದಲ್ಲಿ ಅತ್ಯಂತ ಸಹಾಯಕಾರಿ. ಹೆಚ್ಚು ಹೆಚ್ಚಾಗಿ ವಿಕಾಸಗೊಳಿಸಿದರೆ ಜೀವನದ ಕೆಡುಕು ಸಂಕಟಗಳು ದೂರವಾಗುವುವು. ಶ್ರದ್ಧೆ ಇದ್ದವನು ಎಷ್ಟೇ ವಿಪತ್ತು ಸಂಕಟ ಬಂದರೂ ಅಲುಗಾಡುವುದಿಲ್ಲ. ಶ್ರದ್ಧೆಯಿಂದಲೇ ಜಗತ್ತಿನ ವ್ಯವಹಾರ ನಡೆಯುವುದು.

ಮೊದಲು ಒಂದು ಅಂಕೆಯಿಲ್ಲದೆ ಎಷ್ಟೇ ಸೊನ್ನೆಗಳಿದ್ದರೂ ಅವು ಸೊನ್ನೆಗಳೇ ಆಗುವವು. ಹಾಗೆಯೇ ಶ್ರದ್ಧೆ ಇಲ್ಲದೆ ಆಚರಿಸುವ ಎಲ್ಲಾ ಕ್ರಿಯೆಗಳು ನಿಷ್ಪ್ರಯೋಜನ. ಚಿನ್ನವನ್ನು ಮೂಸೆಯಲ್ಲಿ ಕಾಸಿ ಕರಗಿಸಿ ಅನಂತರ ಬಡಿದರೂ ಕೂಡ ಬಂಗಾರ ಪ್ರಜ್ವಲಿತವಾಗಿಯೇ ಇರುತ್ತದೆ. ಅದೇ ರೀತಿ ಶ್ರದ್ಧೆಗೆ ಎಷ್ಟೇ ಪ್ರಹಾರ ಬಿದ್ದರೂ ವಿಚಲಿತವಾಗುವುದಿಲ್ಲ. ಧರ್ಮದ ಮೂಲವೇ ಶ್ರದ್ಧೆ. ◆

# ಶಿಕ್ಷಣದ ಮಹತ್ವವನ್ನು ಸಾರಿದ ಅಂಬೇಡ್ಕರ್

**ಅಂಬೇಡ್ಕರ್‌ರವರ ಜೀವನ ಪ್ರತಿಯೊಬ್ಬ ವಿದ್ಯಾರ್ಥಿಗೆ ಆದರ್ಶವಾಗಬೇಕು, ಅವರು ಜ್ಞಾನಾರ್ಜನೆಗೆ ತೋರಿದ ಆಸಕ್ತಿ, ಸಂಪನ್ಮೂಲಗಳನ್ನು ಬಳಸಿಕೊಂಡ ಬಗೆ, ಸಮಾಜದ ಬೆಳವಣಿಗೆಗೆ ಶಿಕ್ಷಣವನ್ನು ಉಪಯೋಗಿಸಿಕೊಂಡ ರೀತಿ, ದೇಶಕ್ಕೆ ತೋರಿದ ಗೌರವ ಮತ್ತು ದೇಶ ಪ್ರೇಮ ಹಾಗೂ ಇಡೀ ಭಾರತವನ್ನು ಸಮಗ್ರವಾಗಿ ನೋಡಿದ ಪರಿ ಎಲ್ಲವೂ ಅನುಕರಣೀಯ ಮತ್ತು ಆದರ್ಶ. ಅಂತಹ ಮಹಾನ್ ಸ್ಫೂರ್ತಿಯ, ಮಾನವತಾವಾದಿಯ ವ್ಯಕ್ತಿತ್ವ ಪ್ರತಿ ವಿದ್ಯಾರ್ಥಿ ಬದುಕಿನ ಆದ್ಯ ಭಾಗವಾಗಬೇಕು.**

**– ಡಾ. ಜಗನ್ನಾಥ ಕೆ. ಡಾಂಗೆ**



**ಈ** ದೇಶದ ಭಾವಿ ಪ್ರಜೆಗಳಾದ ಶಾಲಾ-ಕಾಲೇಜುಗಳ ವಿದ್ಯಾರ್ಥಿಗಳು ಅಂಬೇಡ್ಕರ್‌ರವರ ಚಿಂತನೆಗಳನ್ನು ಮೈಗೂಡಿಸಿಕೊಂಡು ಸಂವಿಧಾನದಡಿಯಲ್ಲಿ ಜೀವನ ಸಾಗಿಸುವ ಮತ್ತು ದೇಶವನ್ನು ಮುನ್ನಡೆಸುವ ತಿಳುವಳಿಕೆ ಶಕ್ತಿ ಸಾಮರ್ಥ್ಯಗಳಸಾಮರ್ಥ್ಯಗಳು ಅತ್ಯಗತ್ಯ.

ಡಾ.ಬಿ.ಆರ್.ಅಂಬೇಡ್ಕರ್‌ರವರು ದಾರ್ಶನಿಕ ಭಾರತೀಯ ಸುಧಾರಕ, ಗುಲಾಮಗಿರಿಯನ್ನು ತೊಡೆದು ಹಾಕಲು ಶಿಕ್ಷಣವೇ ಒಂದು ಅಸ್ತ್ರವೆಂದು ನಂಬಿದ್ದರು. ಇದು ಶೋಷಿತರಲ್ಲಿ ಜಾಗೃತಿಯನ್ನು ಮೂಡಿಸಿ ಅವರ ಸಾಮಾಜಿಕ ಸ್ಥಿತಿ, ಆರ್ಥಿಕ ಸುಧಾರಣೆ ಮತ್ತು ಅವರು ರಾಜಕೀಯ ಸ್ವಾತಂತ್ರ್ಯ ಪಡೆಯಬೇಕೆಂಬುದು ಅವರ ಅಭಿಲಾಷೆಯಾಗಿತ್ತು.

ಅಂಬೇಡ್ಕರ್‌ರವರ ಪ್ರಕಾರ ಸಮಾಜಕ್ಕೆ ಅನನ್ಯ ಕೊಡುಗೆ ನೀಡುವಂತೆ ಮಾಡುವ, ಪ್ರತಿ ವ್ಯಕ್ತಿಯಲ್ಲಿ ಅನನ್ಯ ಸಾಮರ್ಥ್ಯವನ್ನು ಸಾಧಿಸಲು ನೆರವಾಗುವುದೇ ಶಿಕ್ಷಣದ ಗುರಿಯಾಗ ಬೇಕು, ಶಿಕ್ಷಣವು ಮಕ್ಕಳ ಗುರಿಯನ್ನು ರೂಪಿಸುವಂತೆ ಮಾಡುವ ಸಾಮರ್ಥ್ಯವನ್ನು ಹೊಂದಿದೆ. ಅಂಬೇಡ್ಕರ್ ಹೇಳಿರುವಂತೆ "ಶಿಕ್ಷಣದಿಂದ ಯಾರನ್ನೂ ಸಹ ವಂಚಿತರನ್ನಾಗಿ ಮಾಡಬಾರದು, ಇದು ಈ ದೇಶದ ಎಲ್ಲಾ ಜನರನ್ನು ತಲುಪಬೇಕು ಮತ್ತು ಶೋಷಿತ ವರ್ಗದವರು ಅದನ್ನು ಕನಿಷ್ಠ ವೆಚ್ಚದಲ್ಲಿ ಪಡೆಯುವಂತಿರಬೇಕು." ಆದ್ದರಿಂದ ಅವರು ಸಂವಿಧಾನದಲ್ಲಿ ಶಿಕ್ಷಣವನ್ನು ಈ ದೇಶದ ಪ್ರತಿಯೊಬ್ಬ ಪ್ರಜೆಯ ಮೂಲಭೂತ ಹಕ್ಕಾಗಿ ನೀಡಿದರು.

ಶಿಕ್ಷಣ ಸ್ವಾತಂತ್ರ್ಯವನ್ನು ರಕ್ಷಿಸುವ ಮತ್ತು ಸಮಾಜದಲ್ಲಿ ತುಳಿತಕ್ಕೊಳಗಾದವರನ್ನು ಮೇಲೆತ್ತಲು ಇರುವ ಸಾಧನವಾಗಿದೆ. ಇದರಿಂದ ಒಬ್ಬ ವ್ಯಕ್ತಿ ಜೀವನದಲ್ಲಿ ಉತ್ತಮ ಬೆಳಕು ಕಾಣಬಹುದು. ದೂರದೃಷ್ಟಿಕೋನ ಮತ್ತು ಬುದ್ಧಿವಂತಿಕೆಯನ್ನು ಬೆಳೆಸುತ್ತದೆ.



ಕೇವಲ ಜ್ಞಾನಕ್ಕಾಗಿ ಅಲ್ಲ, ಮಾನವನಲ್ಲಿ ಜ್ಞಾನ ವೃದ್ಧಿಯ ಜೊತೆಗೆ ನೀತಿ, ಸನ್ನಡತೆ ಮತ್ತು ಮಾನವೀಯ ಮೌಲ್ಯಗಳನ್ನು ಬೆಳೆಸುತ್ತದೆ. ಪ್ರತಿಯೊಬ್ಬ ವ್ಯಕ್ತಿ ಪ್ರಜ್ಞಾವಂತನಾಗಿರಬೇಕು, ಪಡೆದ ಶಿಕ್ಷಣ ಒಬ್ಬ ವ್ಯಕ್ತಿಯನ್ನು ಮುಕ್ತ ಮನಸ್ಸಿನಿಂದ ತಾರ್ಕಿಕವಾಗಿ ಹಾಗೂ ಮುಕ್ತವಾಗಿ ಆಲೋಚಿಸುವಂತೆ ಮಾಡುವುದೇ ಆಗಿದೆ. ಪ್ರತಿಯೊಬ್ಬ ವ್ಯಕ್ತಿ ಸಮಾಜದಲ್ಲಿ ರಾಜಕೀಯ, ಸಾಮಾಜಿಕ, ಆರ್ಥಿಕ ಮತ್ತು ನೈತಿಕ ಬೆಳವಣಿಗೆ ಸಾಧ್ಯವಾಗುವುದು, ಇದರಿಂದ ಸದೃಢ ಸಮಾಜ, ರಾಷ್ಟ್ರವನ್ನು ಕಟ್ಟುವುದು ಸಾಧ್ಯವಾಗುವುದು ಅಂಬೇಡ್ಕರ್ ಅವರ ನಿಲುವಾಗಿತ್ತು.

ಶಿಕ್ಷಣದಲ್ಲಿ ಜ್ಞಾನವು ಅನುಕಂಪ ಮತ್ತು ಸ್ನೇಹಪರತೆಗಳೊಡನೆ ಮಿಶ್ರಣವಾಗಬೇಕು, ಕಲಿಕಾರ್ಥಿಗಳಲ್ಲಿ ಅಥವಾ ವಿದ್ಯಾವಂತರಲ್ಲಿ ನಿಸ್ವಾರ್ಥ, ನಿಷ್ಪಕ್ಷಪಾತ ಮತ್ತು ಹೃದಯವಂತಿಕೆಗಳು ತುಂಬಿರಬೇಕು. ನೈತಿಕ ಮೌಲ್ಯಗಳಿಲ್ಲದ ಶಿಕ್ಷಣ ಅತ್ಯಂತ ಅಪಾಯಕಾರಿ ಆದ್ದರಿಂದ ಉತ್ತಮ ನಡತೆಯ ಬೆಳವಣಿಗೆಯು ಶಿಕ್ಷಣದ ಗುರಿಯಾಗಬೇಕು ಮತ್ತು ಸಮಾಜದ ಸುಧಾರಣೆಗಾಗಿ ಕೆಲಸ ನಿರ್ವಹಿಸುವುದು ವಿದ್ಯಾವಂತರ ಪ್ರಮುಖ ಗುರಿಯಾಗಿರಬೇಕು. ಜೀವನ ನಿರ್ವಹಣೆಗಾಗಿ ಗಳಿಕೆ ಮಾಡುವುದಷ್ಟೇ ಜೀವನವಲ್ಲ, ಸಮಾಜದ ಜನರ ಮತ್ತು ಸಮಾಜದ ಸುಧಾರಣೆಗಾಗಿ ಕೊಡುಗೆ ನೀಡುವುದಕ್ಕಾಗಿ ಸ್ವಲ್ಪ ಸಮಯವನ್ನು ಮೀಸಲಾಗಿರಿಸಿ" ಎಂಬುದು ಅಂಬೇಡ್ಕರ್ ರವರ ಕರೆಯಾಗಿತ್ತು.

**ಅಂಬೇಡ್ಕರ್ ಅವರ ಬದುಕು ಮತ್ತು ಬರಹವು ಶಿಕ್ಷಣ, ಸಂಘಟನೆ ಮತ್ತು ಹೋರಾಟದ ತಳಹದಿ. ಅವರ ಚಿಂತನೆಯ ಮೊದಲ ಮೆಟ್ಟಿಲು ಶಿಕ್ಷಣ, ಈ ಶಿಕ್ಷಣ ಪದ್ಧತಿಯ ಬಗ್ಗೆ ಅವರು ಹೇಳುವುದು ಹೀಗೆ: "ಒಬ್ಬ ವ್ಯಕ್ತಿ ಸಮಾಜದಲ್ಲಿ ಉತ್ತಮ ಸ್ಥಾನವನ್ನು ಗಳಿಸಿ ಆರ್ಥಿಕ ಸುಧಾರಣೆ ಹೊಂದಿ, ರಾಜಕೀಯ ಸ್ವಾತಂತ್ರ್ಯವನ್ನು ಪಡೆದು ಮತ್ತು ಪ್ರತಿ ವ್ಯಕ್ತಿಯೂ ಸಮಾಜಕ್ಕೆ ಅನನ್ಯ ಕೊಡುಗೆಯನ್ನು ನೀಡುವಂತೆ ಮಾಡುವುದೇ ಶಿಕ್ಷಣ.**



ಅಂಬೇಡ್ಕರ್‌ರವರು ಪ್ರಜಾಪ್ರಭುತ್ವಕ್ಕಾಗಿ ಶಿಕ್ಷಣ ಎಂಬುದನ್ನು ಪ್ರತಿಪಾದಿಸಿದ್ದಾರೆ ಹಾಗೂ ಇದು ಶಿಕ್ಷಣದ ಪ್ರಮುಖ ಗುರಿಗಳಲ್ಲಿ ಒಂದಾಗಿ ಪರಿಗಣಿಸಲ್ಪಟ್ಟಿದೆ. ಏಕೆಂದರೆ ಇದು ವ್ಯಕ್ತಿಗೆ ಪ್ರಜಾಪ್ರಭುತ್ವ ಸಮಾಜದ ಪರಿಣಾಮಕಾರಿ ಸದಸ್ಯನಾಗಲು ಸಹಾಯ ಮಾಡುತ್ತದೆ. ಶಿಕ್ಷಣ ಮಾನವನಲ್ಲಿರುವ ಆಗಾಧ ಶಕ್ತಿ ಸಾಮರ್ಥ್ಯ ಮತ್ತು ಪ್ರಯತ್ನಗಳ ಬಗ್ಗೆ ಅಪಾರ ನಂಬಿಕೆಯನ್ನು ಬೆಳೆಸಬೇಕು. ವ್ಯಕ್ತಿಯು ತನ್ನ ಸುತ್ತಮುತ್ತಲಿನ ಪರಿಸರವನ್ನು ಅನುಕೂಲತೆಯಡೆಗೆ ಪರಿವರ್ತನೆ ಮಾಡಿ, ಸಮಾಜದ ಏಳಿಗೆಗಾಗಿ ಶ್ರಮಿಸುವಂತಿರಬೇಕು. ಶಿಕ್ಷಣ ಒಬ್ಬ ವ್ಯಕ್ತಿಯನ್ನು ಮುಕ್ತ ಮನಸ್ಸಿನಿಂದ ತಾರ್ಕಿಕವಾಗಿ ಹಾಗೂ ಮುಕ್ತವಾಗಿ ಆಲೋಚಿಸುವಂತೆ ಮಾಡುವುದೇ ಆಗಿದೆ. ಶಿಕ್ಷಣ ಪಡೆದ ವ್ಯಕ್ತಿಯಿಂದ ಸಾಮಾಜಿಕ, ಆರ್ಥಿಕ ಮತ್ತು ನೈತಿಕ ಬೆಳವಣಿಯಾಗಿ ಸದೃಡ ಸಮಾಜ ಮತ್ತು ರಾಷ್ಟ್ರ ನಿರ್ಮಾಣವಾಗುವುದು. ಶಿಕ್ಷಣ ಪಡೆಯದೆ ಹೋರಾಡುವುದು ಸರಿಯಾದ ಕ್ರಮವಲ್ಲ. ಶಿಕ್ಷಣ ಪಡೆದು ನಮ್ಮ ಹಕ್ಕುಗಳಿಗಾಗಿ ಹೋರಾಟ ಮಾಡಬೇಕಿದೆ. ಹೋರಾಟದಿಂದ ಸಂಘಟನೆಯ ಶಕ್ತಿ ಬೆಳೆಯುವುದು. ಶಿಕ್ಷಣ, ಹೋರಾಟ ಮತ್ತು ಸಂಘಟನೆ ಒಂದಕ್ಕೊಂದು ಪರಸ್ಪರ ತನ್ನ ಶಕ್ತಿಯನ್ನು ವೃದ್ಧಿಸುವ ಮುಖ್ಯ ತತ್ವಗಳಾಗಿವೆ. ಸಮಾಜದ ಪ್ರತಿ ಪ್ರಜೆ ಶಿಕ್ಷಣ ಪಡೆದು ತನ್ನ ಸ್ವಯಂ ಅಭಿವೃದ್ಧಿಯ ಜೊತೆಗೆ ಸಮಾಜದ ಒಳಿತಿಗಾಗಿ ಹೋರಾಟ, ಹೋರಾಟಕ್ಕಾಗಿ ಸಂಘಟನೆ ಮಾಡುವುದು ಅಗತ್ಯವಾಗಿದೆ. ಶಿಕ್ಷಣ, ಹೋರಾಟ ಮತ್ತು ಸಂಘಟನೆಗಳ ಮೂಲಕ ಸಮಾನತೆಯ, ಸದೃಡ, ಸ್ವಾಸ್ಥ್ಯ ಸಮಾಜ ನಿರ್ಮಿಸಲು ಸಾಧ್ಯ.

ಬಾಬಾಸಾಹೇಬರು ಮಹಿಳೆಯರ ಅಭಿವೃದ್ಧಿಗೆ ವಿಶೇಷ ಒತ್ತು ನೀಡಿದರು. ಯಾವುದೇ ಸಮಾಜದ ಪ್ರಗತಿಯನ್ನು ನೋಡಲು ಬಯಸಿದರೆ, ಆ ಸಮಾಜದ ಮಹಿಳೆಯರು ಎಷ್ಟು ಪ್ರಗತಿ ಸಾಧಿಸಿದ್ದಾರೆ ಎಂಬುದನ್ನು ನೋಡಿ ಎಂದು ಅವರು ಹೇಳಿದರು. ಅವರು ಮಹಿಳೆಯರ ಅಭಿವೃದ್ಧಿಯನ್ನು ಸಮಾಜದ ಅಭಿವೃದ್ಧಿಯ ಅಳತೆ ಎಂದು ಪರಿಗಣಿಸಿದರು. ಮಹಿಳಾ ಶಿಕ್ಷಣದ ಪ್ರಬಲ ಪ್ರತಿಪಾದಕರಾಗಿದ್ದರು. ಪುರುಷನು ಶಿಕ್ಷಣ ಪಡೆದರೆ ಒಬ್ಬ ಪುರುಷ ಮಾತ್ರ ಶಿಕ್ಷಣ ಪಡೆದಂತೆ ಆದರೆ ಮಹಿಳೆ ಶಿಕ್ಷಣ ಪಡೆದರೆ ಇಡೀ ಕುಟುಂಬವು ಶಿಕ್ಷಣ ಪಡೆದಂತೆ ಎಂದು ಅವರು ನಂಬಿದ್ದರು.

(ಕೃಪೆ: ವಾರ್ತಾ ಭಾರತಿ)

---


## STATEMENT ABOUT OWNERSHIP & OTHER PARTICULARS ABOUT NEWSPAPER

## AMARA BAAPU CHINTANA

## FORM 4

**[See Rule 8]**

| | | |
|---|---|---|
| 1. Place of publication | : | **Gandhi Bhavana,** Kumara Park East, Bangalore-560001. |
| 2. Periodicity of its publication | : | **Bi-Monthly** |
| 3. Printer's Name | : | **Jeerige Lokesh** |
| Nationality | : | India |
| Address | : | No.88, Jeerige building 11th Cross, Malleshwaram Bangalore-560003 |
| 4. Publisher's Name | : | **Jeerige Lokesh** |
| Nationality | : | India |
| Address | : | No.88, Jeerige building 11th Cross, Malleshwaram Bangalore-560003 |
| 5. Editor's Name | : | **Jeerige Lokesh** |
| Nationality | : | India |
| Address | : | No.88, Jeerige building 11th Cross, Malleshwaram Bangalore-560003 |
| 6. Name and address Of individuals who own The newspaper and partners And shareholders holding More than one percent Of the total capital | : | **Jeerige Lokesh** No.88, Jeerige building 11th Cross, Malleshwaram Bangalore-560003 |

**I Jeerige Lokesh, hereby declare that the particulars given above are true to the best of my knowledge and belief.**

Date : **1/3/2026**

**Sd/–**
**Jeerige Lokesh**
**Publisher**

# Dandi March: History and Significance

The Dandi March, also known as the Salt Satyagraha, was a landmark act of non-violent civil disobedience led by Mahatma Gandhi. It began on March 12, 1930, and concluded on April 6, 1930.

Gandhi, along with 78 followers, marched approximately 241 miles (387 km) from Sabarmati Ashram to the coastal village of Dandi.

The main objective of the march was to defy the British salt monopoly by producing salt from seawater, thereby violating the unjust Salt Laws imposed by the British government.

**Objective of the Movement**

The Dandi March aimed to challenge the British Salt Act of 1882, which prohibited Indians from collecting or selling salt independently.


Gandhi chose salt as a symbol of protest because:


Universal necessity – Salt was used by every Indian, rich or poor

Moral issue – Taxing such a basic need was unjust

Mass participation – It enabled people to join the movement peacefully

On April 6, 1930, Gandhi broke the law by making salt at Dandi, officially launching the Civil Disobedience Movement.



Historical Background

**1. Simon Commission (1928)**

The British government sent the Simon Commission to propose reforms. Since it had no Indian members, it faced massive protests with the slogan "Simon Go Back."

**2. Nehru Report (1928)**

In response, Indian leaders under Motilal Nehru drafted the Nehru Report, demanding dominion status for India. The British ignored these demands.

**3. Purna Swaraj Declaration (1929)**

At the Lahore Session of the Indian National Congress 1929, led by Jawaharlal Nehru, the Congress declared Purna Swaraj

(Complete Independence) as its goal.

**4. Gandhi's 11 Demands**

On January 31, 1930, Gandhi presented 11 demands to Lord Irwin, including:

* Abolition of salt tax
* Reduction of land revenue
* Release of political prisoners
* Protection for Indian industries

When these demands were ignored, Gandhi launched the Dandi March.

**Timeline of the Dandi March**

March 12, 1930–March begins from Sabarmati Ashram

March–April 1930 – Thousands join along the route

April 6, 1930 – Gandhi reaches Dandi and makes salt

This act sparked a nationwide Civil Disobedience Movement.

**Significance of the Dandi March**

**1. Mass Awakening**

For the first time, millions of Indians actively participated in the freedom struggle, making it a true mass movement.

**2. Challenge to British Authority**

Over 60,000 people were arrested, exposing the weakening control of British rule in India.



**3. Role of Women**

Women like Sarojini Naidu and Kamaladevi Chattopadhyay played key roles, marking a turning point in women's participation in politics.

**4. Political Impact**

The movement forced negotiations, leading to the Gandhi–Irwin Pact and Gandhi's participation in the Round Table Conference.

**5. Global Attention**

International media, including reports by journalist Webb Miller, brought global attention to British repression in India.

**6. Legacy of Non-Violence**

The success of non-violent resistance inspired global leaders like:

Martin Luther King Jr.

Nelson Mandela

**96th Anniversary (2026)**

In 2026, India marks the 96th anniversary of the Dandi March. Commemorative "Heritage Marches" retrace the historic route, honoring the original satyagrahis and spreading Gandhi's message of:

Ahimsa (Non-violence)

Satyagraha (Truth-force)

The Dandi March was not just a protest against the salt tax-it was a powerful demonstration of how simple acts of resistance can challenge mighty empires.

It transformed India's freedom struggle into a people's movement and remains a timeless example of the strength of peaceful protest.



# Three Articles, One Revolution

The Treason Case Against Mahatma Gandhi – 10 March 1922

10 March 1922 remains one of the most defining days in India's freedom movement. On this day, Mahatma Gandhi-the global symbol of truth and non-violence-was arrested from Sabarmati Ashram on charges of "treason."

But what led to this arrest was not violence or rebellion in the conventional sense-it was the power of words. Three articles published in his weekly journal Young India shook the moral foundations of British rule.


The Pen That Challenged an Empire Young India was more than a journal-it was a voice of awakening. Through it, Gandhiji spoke directly to the conscience of the nation, urging Indians to rethink their relationship with colonial rule.

The British government saw danger not in weapons, but in ideas.

**1. "Tampering with Loyalty" (29 September 1921)**

In this article, Gandhiji raised a deeply unsettling moral question: Is loyalty to an unjust government a virtue-or a sin?






He appealed to Indian soldiers and government servants, urging them to examine their conscience. If the British rule was responsible for India's economic and moral degradation, then supporting it was ethically wrong.

Without advocating violence, he emphasized non-cooperation as a moral duty. This article ignited a new sense of dignity and self-respect among Indians serving under British authority.

**2. "The Puzzle and Its Solution" (15 December 1921)**

By late 1921, the British government had intensified repression-arrests, imprisonments, and crackdowns on nationalist leaders.

Gandhiji described this as a "puzzle"- the belief that fear could suppress a nation's spirit.

His "solution" was simple yet revolutionary:Remove fear. Embrace suffering. Refuse to cooperate.

He asserted that the path to freedom would open only when Indians stopped fearing prison. This article played a crucial role in transforming jail from a symbol of fear into a badge of honor.

**3. "Shaking the Manes of the Lion" (23 February 1922)**

Perhaps the most bold and direct of the three, this article openly challenged the might of the British Empire.

"No matter how powerful a government is, it cannot crush the soul of a nation that refuses to bow."He warned that repression could not silence a morally awakened people. In a striking statement, he even described "treason" against an unjust regime as a form of moral duty.

This article was seen by the British as a direct provocation-and became a key basis for the sedition charges.

The trial began on 18 March 1922 in Ahmedabad before Judge C. N. Broomfield.

Gandhiji's conduct stunned the world:

He refused legal defense

He accepted all charges

He invited the harshest punishment

In his historic statement, he said: "I am here to invite and submit cheerfully to the highest penalty… I do not ask for mercy." Judge Broomfield, deeply moved, acknowledged Gandhiji as a man of exceptional moral stature before sentencing him to six years of imprisonment.

Though sentenced for six years, Gandhiji was released in 1924 due to health reasons.

**The Deeper Message**

This episode was not just a legal event-it was a moral revolution.

**1. The Power of Words**

An unarmed man, armed only with truth, challenged the most powerful empire of the time.

**2. Moral Responsibility**

Gandhiji did not deflect blame. He owned his actions and accepted punishment as a matter of principle.

**3. Fearlessness**

He transformed prison from a place of punishment into a "temple of sacrifice."

**Legacy**

The British could imprison Mahatma Gandhi, but not his ideas. Those three articles continue to inspire generations to stand against injustice-with courage, conscience, and conviction.

Gandhi Darshan ◆

---

# Karnataka Sarvodaya Mandal

Vinoba Ashram, Kumara Park East, Bengaluru - 560001

## Constitution of State Executive Committee 2026- 2029

following committee is constituted to carry on the day to day activities of the Karnataka Sarvodaya Mandal, Bengaluru

**Dr. Y. C. Doddaiah**
President

**Sri Chandrappa K. H.**
Secretary cum Treasurer

**Dr. B.A. Patil**
Secretary. Hutatma Appa rao Patil Foundation, Kalaburagi, Member

**Sri D. N. Venkartaramanaiah**
Former Officer SBM
Member

**Sri Kiran C.D.**
Journalist
Member

**Dr. Gururaj Poshettihalli**
Author, Member

**Dr. Munjula Hullahalli**
Former Deputy Director
Youth Empowerment and Sports
Mysore, Member

# Gandhiji and the Spirit of Women Satyagrahis



Women's Day is a day to recognize the strength of half of humanity, to honor their struggles, and to remind ourselves that the goal of true equality is yet to be fully realized. Celebrating Women's Day as a routine event without understanding women's rights, safety, and dignity makes the celebration incomplete.

During the historic Salt March led by Mahatma Gandhi, a significant yet lesser-known episode highlights his deep trust in women's strength and moral courage.

When Gandhi prepared for the Dandi March, he carefully selected 79 satyagrahis to accompany him. Notably, no women were included in this initial list. This decision raised an important question. Durga Ben Desai, wife of Mahadev Desai, approached Gandhi along with other women from the Sabarmati Ashram. She respectfully asked why no women had been chosen for such a historic movement.

Gandhi responded with a thoughtful explanation. He anticipated this question and clarified that including women in the initial march might have allowed the British to claim that he was using women as shields against repression. More importantly, he believed that women possessed a greater capacity for sacrifice and resilience in non-violent struggle.

He assured them that their role would be far more significant in the later stages of the movement. The journey from Sabarmati to Dandi, he said, would be filled with public support and enthusiasm. The true test of courage would come afterward- when repression intensified.

Gandhi outlined a clear plan of leadership. After his arrest, Abbas Tyabji would lead the movement. And when the struggle reached its most critical phase, it would be Sarojini Naidu who would step forward to lead, especially with women playing a central role.



True to his vision, after Gandhi's arrest and the brutal lathi-charge on satyagrahis, many were left injured and imprisoned. At that crucial moment, a group of courageous women, led by Sarojini Naidu, advanced fearlessly.

When a British officer ordered her to stop, citing government restrictions, Sarojini Naidu firmly replied that she was following Gandhi's command and could not turn back. In a remarkable display of determination, she stood her ground for hours, refusing to yield. Eventually, even the authorities were compelled to show a measure of respect for her resolve.

This episode is not just a story from history-it is a powerful reminder of the role women have played in shaping movements, nations, and moral courage itself. Gandhi did not sideline women; he entrusted them with the most phase of the struggle. On this International Women's Day, let us move beyond symbolic celebration and truly recognize the strength, leadership, and sacrifices of women-past and present.

# A Silent Revolution of Truth

**On 10 April 1917, a frail yet resolute figure-Mahatma Gandhi-stepped onto the soil of Champaran. That quiet arrival would soon shake the very foundations of the British Empire. This moment marked the beginning of Gandhi's first successful Satyagraha in India-an experiment that transformed non-violence from a personal virtue into a powerful weapon of mass resistance.**

From South Africa to Champaran: The Guidance of Gokhale

When Gandhi returned to India in 1916, his political mentor Gopal Krishna Gokhale advised him:

"Keep your ears and eyes open, but keep your mouth closed."

Gandhi followed this advice with discipline. Traveling across India-from Kashmir to Kanyakumari in third-class railway compartments-he immersed himself in the life of ordinary people, understanding their struggles, customs, and realities.

It was during this time that a determined farmer, Raj Kumar Shukla, approached Gandhi and persistently urged him to visit Champaran to witness the plight of indigo farmers exploited by European planters.

**The Power of Documentation: Truth as Evidence**

Upon reaching Champaran, Gandhi adopted a method unlike any other leader of his time.

He did not raise fiery slogans, nor did he provoke confrontation. Instead, he began systematically documenting the truth.

With the help of lawyers and local leaders, thousands of farmers recorded their statements-often on stamped papers. These testimonies exposed the harsh realities of exploitation so clearly that the colonial authorities found it impossible to deny them.

This was truth presented not as rhetoric, but as irrefutable evidence.

**"Gather the Truth and Remain Silent": A New Path of Resistance**

Champaran had seen resistance before, often marked by anger and violence. Gandhi transformed that anger into disciplined non-violence.



His message was simple yet profound: "Gather the truth and remain silent."

He acted like a calming force-what locals described as a "cooling balm"-whenever tensions rose. Gandhi made it clear that the struggle was not against individuals, but against injustice itself.

**Champaran: The Laboratory of Freedom**

Champaran became a testing ground for India's future freedom struggle, for three key reasons:

(i) Non-Violence as a Political Force

For the first time, non-violence moved beyond personal morality and became a mass political strategy.

(ii) People's Participation

Thousands of farmers, many illiterate, came forward with courage-offering their testimonies through signatures and thumb impressions.

(iii) Beginning of the End of Colonial Rule

Nearly 60 years after the Revolt of 1857, Champaran signaled a turning point. Within 30 years of this movement, India would achieve independence. ◆

# ಅಮರ ಬಾಪು ಚಿಂತನ

ಗಾಂಧಿ ದನಿ ದರ್ಪಣ — ಕನ್ನಡ ಮತ್ತು ಆಂಗ್ಲ ದ್ವೈಮಾಸಿಕ

# AMARA BAAPU CHINTANA

Mirror of Gandhi — Kannada & English Bi-Monthly

Regd. Office : Gandhi Bhavan, Kumara Park East, Bangalore-560 001

'ಅಮರ ಬಾಪು ಚಿಂತನ' ಇದೀಗ ಹೊಸ ಸ್ವರೂಪದ ಆನ್ಲೈನ್ ಮಾಧ್ಯಮಕ್ಕೆ ಪ್ರವೇಶ !



ನಿಮ್ಮ ಪ್ರೀತಿಯ 'ಅಮರ ಬಾಪು ಚಿಂತನ' ಪತ್ರಿಕೆ ಮುದ್ರಣ ಮಾಧ್ಯಮದಿಂದ ಡಿಜಿಟಲ್ ಮಾಧ್ಯಮಕ್ಕೆ ಹೆಜ್ಜೆಯನ್ನು ಇಡುತ್ತಿದೆ. 14ನೇ ವರ್ಷದ ಹೊಸ್ತಿಲಲ್ಲಿರುವ ಪತ್ರಿಕೆಯು ಅಂತರ್ಜಾಲದ ಮುಖಾಂತರ ಆನ್‌ಲೈನ್ ಪತ್ರಿಕೆಯಾಗಿ ಪ್ರಕಟವಾಗುತ್ತದೆ. ಬದಲಾಗಿರುವ ತಂತ್ರಜ್ಞಾನದಿಂದಾಗಿ ನಿಮ್ಮ ಕೈಬೆರಳ ತುದಿಯಲ್ಲೆ ಅಂದರೆ www.amarabaapuchintana.org ಕ್ಲಿಕಿಸುವುದರ ಮೂಲಕ ಪತ್ರಿಕೆ ಸಮಗ್ರ ಸಂಚಿಕೆಯನ್ನು ಓದಬಹುದು. ಹೆಚ್ಚೆಚ್ಚು ಓದಗರು ಆನ್‌ಲೈನ್ ಪತ್ರಿಕೆಗೆ ನೊಂದಾವಣೆ ಮಾಡಿಕೊಳ್ಳುವ ಮುಖಾಂತರ ಪ್ರೋತ್ಸಾಹ ನೀಡಬೇಕೆಂದು ಕೋರುತ್ತೇವೆ.

**Editor-in-Chief :**
**JEERIGE LOKESH**

**Advisory Board**
- Dr.Wooday P Krishna
- Prof.Mallepuram G.Venkatesh
- H.Krishna

For Details Contact :
**94480 42653**

For Advertisement :
**90356 18076**

ಗಾಂಧಿ ಒಂದು | ಶಕ್ತಿ, ಸಿದ್ಧಾಂತ, ಪ್ರಭಾವ, ವ್ಯಕ್ತಿತ್ವ, ಅಹಿಂಸಾ ಹೋರಾಟ

ನನ್ನ ಜೀವನವೇ ನನ್ನ ಸಂದೇಶ | My Life is My Message

editor.abc2020@gmail.com facebook.com/amarabaapuchintana www.amarabaapuchintana.org



## ಅಮರ ಬಾಪು ಚಿಂತನ ಪತ್ರಿಕೆಯ ಸಂಪಾದಕರಾದ ಜೀರಿಗೆ ಲೋಕೇಶ್ ರವರ ಸಾರಥ್ಯದಲ್ಲಿ ಮೂಡಿಬರುತ್ತಿರುವ

# ನಂದಿ ವಾಹಿನಿ ಯೂಟ್ಯೂಬ್ ಚಾನಲ್

## ಸದಭಿರುಚಿಯ ಮತ್ತೊಂದು ಹೆಸರು!

# Nandi Vahini Youtube Channel

### ಈ ವಾಹಿನಿಯಲ್ಲಿ ಪ್ರತಿನಿತ್ಯ ಪ್ರಸಾರವಾಗುವ ವೈವಿಧ್ಯಮಯ ಕಾರ್ಯಕ್ರಮಗಳು

* ಸಂಗೀತ ಸಾಗರ
* ಚಿಣ್ಣರ ಲೋಕ
* ನೃತ್ಯ ಸಂಗಮ
* ಜ್ಯೋತಿಷ್ಯ ದರ್ಪಣ
* ನಂದಿ ನಳಪಾಕ
* ಕೀರ್ತಿಗೊಂದು ಕಿವಿಮಾತು

#88, Jeerige Building,11th Cross, Sampige Road,
Malleshwaram, Bangalore-560003,
Mob: 94480 42653 | 90190 87050

Scan QR Code

nandivahini1@gmail.com
www.facebook.com/Nandi Vahini
X.com/@NandiVahini
www.nandivahini.com
www.instagram.com/nandivahini

Amara Baapu Chintana Kannada / English Bi-monthly.
RNI Regd.No.KARBIL/2013/48372. Posted at Bangalore PSO, BG-560026. Periodically

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

# ಕರುನಾಡಿನಲ್ಲಿ ನೆಮ್ಮದಿಯ **ಗ್ಯಾರಂಟಿ**

## ಸರ್ವರ ಏಳ್ಗೆಗೆ **ಸಹಕಾರ**





- ರಾಜ್ಯದಲ್ಲಿ ವಾರ್ಷಿಕ ವಹಿವಾಟು **₹. 25,000 ಕೋಟಿ** ಜೊತೆಗೆ ಪ್ರತೀ ದಿನ ಒಂದು ಕೋಟಿ ಲೀಟರ್ ಹಾಲು ಉತ್ಪಾದನೆ
- ಕ್ಷೀರಧಾರೆ ಯೋಜನೆಯಡಿ ಹಾಲು ಉತ್ಪಾದಕರಿಗೆ **ಪ್ರತಿ ಲೀಟರಿಗೆ ₹. 5 ಗಳ** ಪ್ರೋತ್ಸಾಹಧನ
- ಕೃಷಿ ಚಟುವಟಿಕೆಗಳನ್ನು ಕೈಗೊಳ್ಳಲು ರೈತರಿಗೆ ಅಗತ್ಯವಿರುವ ಬಂಡವಾಳವನ್ನ ಒದಗಿಸುವ ಸಲುವಾಗಿ ಮಾರ್ಚ್ 2025ರ ಅಂತ್ಯಕ್ಕೆ **59.39 ಲಕ್ಷ ರೈತರಿಗೆ** ಬೆಳೆ ಸಾಲ ವಿತರಣೆ (₹. 50,114 ಕೋಟಿ ವೆಚ್ಚ)
- ಬೆಳೆ ಸಾಲಕ್ಕಾಗಿ ಬಡ್ಡಿ ಸಹಾಯಧನ ಯೋಜನೆಯಡಿ **₹. 63.47 ಲಕ್ಷ ರೈತರಿಗೆ** ಆರ್ಥಿಕ ನೆರವು (₹. 2,605 ಕೋಟಿ ವೆಚ್ಚ)
- ನಾಡಿನ ಮಹಿಳೆಯರ ಸ್ವಾವಲಂಬಿ ಬದುಕಿಗೆ ಬೆಂಬಲವಾಗಿ ನಿಲ್ಲುವ ಉದ್ದೇಶದಿಂದ ಕಳೆದೆರಡು ವರ್ಷಗಳಲ್ಲಿ **42,341 ಸ್ವ ಸಹಾಯ ಗುಂಪುಗಳಿಗೆ** ಸಾಲ ವಿತರಣೆ (₹. 1,817 ಕೋಟಿ)
- 2024-25ನೇ ಸಾಲಿನ ಬೆಂಬಲ ಬೆಲೆ ಯೋಜನೆಯಡಿ ಸೂರ್ಯಕಾಂತಿ, ಶೇಂಗಾ, ಹೆಸರುಕಾಳು, ಭತ್ತ ಸೇರಿದಂತೆ ಹಲವು ಕೃಷಿ ಉತ್ಪನ್ನಗಳನ್ನು ಖರೀದಿಸಲಾಗಿದ್ದು, ಒಟ್ಟಾರೆ **2,56,433 ರೈತರು** ಫಲಾನುಭವಿಗಳಾಗಿರುತ್ತಾರೆ.
- ಅನಧಿಕೃತವಾಗಿ ಕಾರ್ಯಾಚರಿಸುತ್ತಿರುವ ಗಿರವಿದಾರ ಸಂಸ್ಥೆಗಳು ಹಾಗೂ ಚೀಟಿ ಸಂಸ್ಥೆಗಳ ಮೇಲೆ ನಿಗಾ
- ಸಹಕಾರ ಸಂಘದ ನೇಮಕಾತಿಗಳಲ್ಲಿ ಸಹಕಾರ ಡಿಪ್ಲೋಮಾ, ಪದವಿ ಪಡೆದವರಿಗೆ ಆದ್ಯತೆ

## ಕರ್ನಾಟಕ ನವ ನಿರ್ಮಾಣಕ್ಕೆ **ಗ್ಯಾರಂಟಿ ಸರ್ಕಾರ...**

**ಗ್ಯಾರಂಟಿ ಯೋಜನೆಗಳ ಜೊತೆಗೆ ಅಭಿವೃದ್ಧಿ ಕಾರ್ಯಕ್ರಮಗಳನ್ನು ಜಾರಿ ಮಾಡುತ್ತಾ ನುಡಿದಂತೆ ನಡೆದು ಜನರ ವಿಶ್ವಾಸ ಗಳಿಸಿದ್ದೇವೆ.**

ವೈಜ್ಞಾನಿಕ ಮನೋಧರ್ಮ ಬೆಳೆಸಿಕೊಳ್ಳುವುದು; ಪ್ರಶ್ನೆ ಮಾಡುವ ಮತ್ತು ಬದಲಾವಣೆಗೆ ಒಡ್ಡಿಕೊಳ್ಳುವ ಮನಃಸ್ಥಿತಿ ಬೆಳೆಸಿಕೊಳ್ಳುವುದು.- ಪ್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ ಮೂಲಭೂತ ಕರ್ತವ್ಯ

CMofKarnataka https://dipr.karnataka.gov.in/

ಕರ್ನಾಟಕ ವಾರ್ತೆ

Printed & Published by : JEERIGE LOKESH, Printed at Screen Impressions,
No. 88, 1st floor, Jeerige building, 11th cross, Malleswaram, Bangalore - 560 003
Published at Gandhi Bhavana, Kumara Park East, Bangalore-560001, Editor : JEERIGE LOKESH.